॥ श्रीः ॥

ಶ್ರೀರಾಮಧನ್ವಂತರೀ ವಿಜಯತೇ
ಶ್ರೀಗುರುರಾಜೋ ವಿಜಯತೇ

# ಸುಖ

## ಭಾಗ -2

( ಸುಖಕ್ಕೆ ಸನಾತನಧರ್ಮ ಸಹಕಾರಿಯೋ, ವಿರೋಧಿಯೋ)

ಗ್ರಂಥಕರ್ತರು :
ಶ್ರೀ 108 ಶ್ರೀ ದೇವೇಂದ್ರತೀರ್ಥರು
ಮೈಸೂರು.

ಶ್ರೀ ಮಧ್ವಾಂತರ್ಗತ ಶ್ರೀರಾಮಧನ್ವಂತರೀ ವಿಜಯತೇ

ಶ್ರೀಮಧ್ವರಾಜೋ ವಿಜಯತೇ

ಶ್ರೀ ವಾದಿರಾಜೋ ವಿಜಯತೇ

ಶ್ರೀವ್ಯಾಸರಾಜೋ ವಿಜಯತೇ

ಶ್ರೀ ದೇವೇಂದ್ರತೀರ್ಥಗುರುಭ್ಯೋ ನಮಃ

# ಸುಖ

## ಭಾಗ - 2

## 6. ನಮ್ಮ ಕರ್ತವ್ಯಕರ್ಮಗಳು

ನಮಗೆ ಸುಖವನ್ನು ಹೊಂದುವ ಮಾರ್ಗವನ್ನು ತಿಳಿಸುವುದಕ್ಕೆ ಹೊರಟಿರುವ ವೇದ , ಉಪವೇದ , ಕಲಾವಿದ್ಯೆ ಇವುಗಳನ್ನು ಪರಿಶೀಲಿಸಿದ ಪ್ರಪಂಚಕ್ಕೆ ಕರ್ತೃ ಎನಿಸಿದ ಒಬ್ಬನಾದ ದೇವರೇ ಎಲ್ಲಾ ಚೇತನಾಚೇತನದಲ್ಲೂ ನಿಂತು ಬುದ್ಧ್ಯಾದಿಗಳಿಗೆ ಪ್ರೇರಕನಾಗಿ ನಮ್ಮ ಸುಖದುಃಖಾದಿಗಳಿಗೆಕಾರಣನಾಗಿದಾನೆಂದು ಕಂಡು ಬರುತ್ತದೆ. ಆದ್ದರಿಂದ ಸರ್ವಕರ್ತನಾದ ಈಶ್ವರನ ಅನುಗ್ರಹಕ್ಕೆ ಪಾತ್ರರಾದವರಿಗೆ ಯಾವ ಸುಖವು ತಾನೇ ಸುಲಭವಾಗಿ ದೊರಕಲಾರದು ? ಈ ಲೋಕಪರಲೋಕಸುಖವನ್ನು ಬಯಸುವವರು ನಾವು ಹಿಂದೆ ಹೇಳಿದ ಮತ್ತು ಸಂದರ್ಭಾನುಸಾರ ಮುಂದೆ ಹೇಳುವ ದೃಷ್ಟಾಂತಗಳಿಂದಲೂ, ಅತೀಂದ್ರಿಯವಾದ ವಸ್ತುಗಳನ್ನು ನಂಬಿ ದೇವರ ಅನುಗ್ರಹವನ್ನು ಸಂಪಾದಿಸಲೆಬೇಕು. ಆ ಮಾರ್ಗವನ್ನೇ ಈಗ ತಿಳಿಯಪಡಿಸುತ್ತೇವೆ.

ಶಾಸ್ತ್ರಗಳನ್ನು ಚೆನ್ನಾಗಿ ಪರಿಶೀಲಿಸಿದರೆ ನಮ್ಮ ಸಕಲ ಅನಿಷ್ಟನಿವೃತ್ತಿಯೂ, ಸಕಲ ಇಷ್ಟಪ್ರಾಪ್ತಿಯೂ ಆ ದೇವರ ಅನುಗ್ರಹದಿಂದಲೇ ಆಗುವುದೆಂದು ಸಕಲಆಸ್ತಿಕರು ನಂಬುತ್ತಾರೆ. ಅವನ ಅನುಗ್ರಹ ಯಾವುದರಿಂದ ಆಗುತ್ತದೆ ಎಂಬ ವಿಷಯದಲ್ಲಿ , ಉತ್ತಮಜಾತಿಯಲ್ಲಿ ಹುಟ್ಟುವುದರಿಂದ , ಪುಣ್ಯಕೆಲಸ ಮಾಡುವುದರಿಂದ , ವೇದಭ್ಯಾಸದಿಂದ, ಯಜ್ಞ ಯಾಗಾದಿಗಳಿಂದ, ಕೆರೆಭಾವಿ ಮೊದಲಾದವನ್ನು ನಿರ್ಮಿಸುವುದರಿಂದ ಮರಗಳನ್ನು ನೆಡೆಸುವುದರಿಂದ, ಬಡವರಿಗೆ ವಸತಿ ಕಲ್ಪನೆ ನಾಡುವುದು ಅಥವಾ ಅನ್ನ ಮುಂತಾದ ಪದಾರ್ಥಗಳ ದಾನ ಮಾಡುವುದರಿಂದ, ನಾನಾಜನ ಶುಶ್ರೂಷೆ ಮಾಡುವುದರಿಂದ, ಬ್ರಹ್ಮಜ್ಞಾನವನ್ನು ಸಂಪಾದನೆ ನಾಡುವುದರಿಂದೆಂಬುದಾಗಿ ಒಬ್ಬೊಬ್ಬರೂ ತಮ್ಮ ತಮ್ಮ ಭಿನ್ನ ಅಭಿಪ್ರಾಯಗನ್ನು ಕೊಡುತ್ತಿರುವುದು ಕಂಡುಬರುತ್ತದೆ. ಮೊದಲು ಆದೇವರು ಯಾರೆಂಬುದನ್ನು ತಿಳಿಯುವುದಕ್ಕೆ ಹೊರಟರೆ ಶ್ರೀ ಕೃಷ್ಣನಲ್ಲದೇ ಮತ್ತೊಬ್ಬನಾಗಲಾರನು. ಆ ಕೃಷ್ಣನೇ, ‘‘ನಾನು ವೇದಾದಿಗಳಿಗೆ ವಶವಾಗುವವನಲ್ಲ , ಭಕ್ತಿಗೆ ಮಾತ್ರ ವಶನಾಗುವನು ‘‘ಎಂದು ಹೇಳಿಕೊಂಡಿದ್ದಾನೆ. ಆಕಾರಣದಿಂದ ಅವನ ಅನುಗ್ರಹಸಂಪಾದನೆ ಮಾಡಬೇಕೆಂಬ ಆಪೇಕ್ಷೆ ಉಳ್ಳವರು ಜಾತಿ, ದ್ರವ್ಯ, ಬಲ, ಆರೋಗ್ಯ, ಬುದ್ಧಿ ಜನಗಳ ಪ್ರೀತಿಸಂಪಾದನೆ ಇವೇ ನೊದಲಾದವುಗಳ ಕಡೆ ಅತಿಯಾದ ದೃಷ್ಟಿ ಕೊಡಬೇಕಾಗಿಲ್ಲ, ಆದರೆ ಮೇಲ್ಕಂಡ ವಿಷಯಗಳು ದೇವರು ನಮ್ಮಿಂದ ಬಯಸುವ ಭಕ್ತಿಸಂಪಾದನೆಗೆ ಸಹಕಾರಿಗಳಾಗುವಾಗ ಅವುಗಳನ್ನು ಆಶಯಿಸಲೇಬೇಕಾಗುವುದರಿಂದ ಅವುಗಳೆಲ್ಲವೂ ಅತ್ಯಾವಶ್ಯಕವಾದವುಗಳೇ ಎಂಬುದರಲ್ಲಿ ಸಂಶಯವಿಲ್ಲ. ಅವುಗಳೇ ಭಕ್ತಿಗೆ ಪ್ರತಿಕೂಲವಾಗಿ ಕಂಡುಬರುವ ಸಂದರ್ಭದಲ್ಲಿ ಅವುಗಳೆಲ್ಲವೂ ತ್ಯಾಜ್ಯಗಲೇ ಆಗುತ್ತವೆ.

ಈಗ ಜನಾಂಗಕ್ಕೆ ಭಕ್ತಿವಿಷಯ ಪರಿಚಯ ಮಾಡಿಕೊಡುವುದಕ್ಕೆ ಸ್ವಲ್ಪ ಅವಕಾಶ ತೆಗೆದುಕೊಳ್ಳುತ್ತೇವೆ. ವಿಶೇಷಭಕ್ತಿವಿಷಯ ತಿಳಿಯಬೇಕೆಂಬುವವರು ಮುಂದೆ ನಮ್ಮಿಂದ ಪ್ರಕಟಸಲ್ಪಡಬೇಕೆಂದಿರುವ 'ಭಕ್ತಿ' ಎಂಬ ಪುಸ್ತಕವನ್ನು ನಿರೀಕ್ಷಿಸಬೇಕು.

ವಿವೇಕಿಗಳು ಮತ್ತೊಬ್ಬರನ್ನು ನಮಗಿಂತ ಉತ್ತಮರೆಂದು ತಿಳಿದು ವಿಶೇಷಪ್ರೀತಿ ಅವರಲ್ಲಿ ಮಾಡುವುದಕ್ಕೆ ಭಕ್ತಿ ಎಂದು ತಿಳಿಯುತ್ತಾರೆ. ತಾಯಿ , ತಂದೆ , ಗುರು , ರಾಜ ಮೊದಲಾದವರನ್ನು ನಮಗಿಂತ ಉತ್ತಮರೆಂದು ತಿಳಿದು ಅವರಲ್ಲಿ ಪ್ರೀತಿ ಮಾಡುತ್ತಿರುವಾಗ, ಇವನಿಗೆ ಮಾತೃಭಕ್ತಿ, ಪಿತೃಭಕ್ತಿ, ಗುರುಭಕ್ತಿ, ರಾಜಭಕ್ತಿ ಇದೆಯೆಂದು ಜನರು ಹೇಳುತ್ತಾರೆ.ಹಾಗೇ ಭಕ್ತಿ ಮಾಡಬೇಕೆಂಬ ಆಪೇಕ್ಷೆ ಉಳ್ಳವರು ಹಿಂದೆ ಹೇಳಿದಂತೆ ಇವರು ನಮಗಿಂತ ಉತ್ತಮರೆಂದುತಿಳಿದು ಪ್ರೀತಿ ಮಾಡುತ್ತಿದ್ದೇವೆ ಎಮದು ಹೇಳಿದರೆ ಮಾತ್ರ ಸಾಲದು ಎನ್ನುವಾಗ ; ಅವರುಗಳ ಭಾವಚಿತ್ರವನ್ನು ಇಟ್ಟುಕೊಂಡು ಅದಕ್ಕೆ ಹೂವಿನಹಾರ ಹಾಕೋಣ, ಊದಿನಕಡ್ಡಿ ಹಚ್ಚೋಣ. ಇವುಗಳನ್ನು ಮಾಡಿದ ಮಾತ್ರಕ್ಕೆ ಅದು ಭಕ್ತಿಯ ಕಾರ್ಯವೆನಿಸುತ್ತದೆಯೇ ? ಹಾಗಾದರೆ ಅವರುಏನು ಮಾಡಿದರೆ ಭಕ್ತರಾಗುತ್ತಾರೆ ಎಂದರೆ ? ಮೊದಲು ಅವರಿಗೆ ದೊಡ್ಡವರಲ್ಲಿ ಶ್ರದ್ಧೆ ವಿನಯ ಮೊದಲಾದ ಭಾವಗಳು ಇರಬೇಕು. ಅವರು ಹೇಳುವ ಕಾರ್ಯವುನಮಗೆ ಇಷ್ಟವಿರಲಿ , ಇಲ್ಲದಿರಲಿ , ಸುಲಭಸಾಧ್ಯವಾಗಿರಲಿ ಅಥವಾ ಕಷ್ಟಸಾಧ್ಯವಾಗಿರಲಿ, ಲಾಭಕ್ಕೆ ಕಾರಣವಾಗಿರಲಿ ಅಥವಾ ನಷ್ಟಕ್ಕೆ ಕಾರಣವಾಗಿರಲಿ, ಮಾನಕ್ಕೆ ಕಾರಣವಾಗಿರಲಿ ಅಥವಾ ಆಪಮಾನಕ್ಕೆ ಕಾರಣವಾಗಿರಲಿ , ಅದ್ಯಾವುದನ್ನೂ ಲೆಕ್ಕಿಸದೇ ಅವರ ಇಷ್ಟದಂತೆ

ಮಾಡಬೇಕು. ಈ ಗುಣಕ್ಕೆ ವಿಧೇಯತಾ (ಟಚಿಃಭಜಿಟ್ಟಿಛಿ )ಎಂದೂ ಕರೆಯುತ್ತಾರೆ. ಇದು ಸಜ್ಜನರಿಗೂ,ಶಾಸ್ತ್ರಕ್ಕೂ ಸಮ್ಮತವಾದ ವಿಷಯವೇ ಆಗಿದೆ. ದೊಡ್ಡವರು ತಮ್ಮ ಅಧೀನನಾದ ವ್ಯಕ್ತಿಯನ್ನು ಕುರಿತು ನಾವು ಬರುವವರೆಗೂ ಈ ಸ್ಥಳದಲ್ಲಿ ಕುಳಿತಿರು ಎಂದು ಆಜ್ಞೆ ಮಾಡಿದರೆ, ಅದರಂತೆ ಅಲ್ಲೇ ಕುಳಿತಿದ್ದರೆ, ಕಷ್ಟಪಡದಿದ್ದರೂ ಅದೇ ಅವರ ಸೇವಾ ಆಗಿ ಅವನು ಅವರ ಭಕ್ತನೆನಿಸುವನು. ಅವರಿಗೆ ಇಷ್ಟವಲ್ಲದ ಕಷ್ಟವಾದ ಕೆಲಸ ಮಾಡಿದರೂ ಅವನಂತಹ ಭಕ್ತನೆಂಬ ಅಪವಾದಕ್ಕೆ ಗುರಿಯಾಗುವನು. ಪ್ರಕೃತ ದೇವರ ಭಕ್ತರು ಹೇಗಿದ್ದರೆ ಅವರು ಸರಿಯಾದ ಭಕ್ತರೆನಿಸುವರು ಎಂದರೆ, ಅವನ ಆಜ್ಞಾಪರಿಪಾಲನೆ ಮಾಡುವುದೇ ಭಕ್ತರ ಮೊದಲನೆಯ ಮುಖ್ಯ ಕರ್ತವ್ಯವಾದ್ದರಿಂದ ದೇವರ ಆಜ್ಞಾರೂಪವಾದ, ಶ್ರುತಿ, ಸ್ಮೃತಿ, ಇತಿಹಾಸ, ಪುರಾಣ ಇವುಗಳನ್ನು ಪರಿಶೀಲಿಸುತ್ತಾ '' ಮಾಡು'' ಎಂಬ ಕಾರ್ಯಗಳನ್ನು ಮಾಡುತ್ತಲೂ, ''ಬಿಡು'' ಎಂಬ ಕಾರ್ಯವನ್ನು ಬಿಡುತ್ತಲೂ ಇರಬೇಕು. ಹಾಗೆ ಇರುವವರಲ್ಲಿ ತಾನೇ ದೇವರಿಗೆ ಪ್ರೀತಿ ಬಂದು ಅನುಗ್ರಹ ಮಾಡಬೇಕೆಂಬ ಅಪೇಕ್ಷೆ ಬರುತ್ತದೆ ಎಂಬುದನ್ನು ರಾಜಾದಿಗಳ ದೃಷ್ಟಾಂತದಿಂದ ತಿಳಿಯಬಹುದಾಗಿದೆ. ಪ್ರಕೃತ ದೈವಭಕ್ತರು ಮಾಡಬೇಕಾದ ಕರ್ಮಗಳನ್ನು ತಿಳಿಸುತ್ತಿದ್ದೇವೆ. ಇದು ಯಾವ ಅಗ್ರಹದಿಂದಲೂ ಆಡುವ ಮಾತಲ್ಲ, ಈ ವಿಷಯದಲ್ಲೋ, ಹಿಂದೆ ಹೇಳಿದ ವಿಷಯಗಳಲ್ಲೋ ಅಥವಾ ಮುಂದೆ ಹೇಳುವ ವಿಷಯದಲ್ಲೋ, ನಮ್ಮಲ್ಲಿ ವರೋಧಬುದ್ಧಿ ಕಂಡುಬಂದರೆ ಸೌಹಾರ್ದದಿಂದ, ನಮ್ಮನ್ನು ಆಕ್ಷೇಪಿಸಿದರೆ ಸರಿಯಾದ ಉತ್ತರವನ್ನು ಕೊಟ್ಟು ಸಂತೋಷಪಡಿಸಲು ಸಿದ್ಧರಾಗಿದ್ದೇವೆ.

ದೇವರು ಶಾಸ್ತ್ರಗಳಲ್ಲಿ ತಾನು ನಾನಾಜಾತಿಗಳನ್ನು ನಿರ್ಮಾಣ ಮಾಡಿದ್ದೇನೆಂದು ಘಂಟಾಘೋಷವಾಗಿ ಹೇಳಿರುವಾಗ, ಶಾಸ್ತ್ರದಲ್ಲಿ

‘ಜಾತಿ’ ಎಂಬ ಪದವೇ ಇಲ್ಲ ಎಂಬುದಾಗಿ ಹೇಳುವ ಪಂಡಿತರ ಮಾತು ನಮಗೆ ಆಶ್ಚರ್ಯಕರವಾಗಿ ಕಾಣುತ್ತಿದೆ. ದೇವರು ಸಕಲ ಪ್ರಾಣಿಗಳನ್ನೂ ಅವರ ಉಪಭೋಗಕ್ಕೋಸ್ಕರ ಜಡಪದಾರ್ಥಗಳನ್ನೂ ನಿರ್ಮಾಣಮಾಡಿ ಅವರಿಗೆ ಸುಖದ ಮಾರ್ಗವನ್ನು ತಿಳಿಸುವದಕ್ಕೋಸ್ಕರ ಶಾಸ್ತ್ರಗಳನ್ನು ನಿರ್ಮಾಣ ಮಾಡಿರುವಾಗ; ಲೋಕ ಮತ್ತು ಶಾಸ್ತ್ರಗಳು ಹೊಂದಿಕೊಂಡಿರಬೇಕೇ ವಿನಹ ಪರಸ್ಪರ ವಿರುದ್ಧವಾಗಿರುವುದಿಲ್ಲ. ಅಂತಹ ವಿರುದ್ಧ ಕೆಲಸವನ್ನು ದೇರು ಸರ್ವಥಾ ಮಾಡುವುದಿಲ್ಲವಷ್ಟೇ! ಆದ್ದರಿಂದ ದೇವರು ಒದಗಿಸಿರುವ ಪದಾರ್ಥಗಳ ಸ್ಥಾನಮಾನಗಳನ್ನು ಸರಿಯಾಗಿ ತಿಳಿದರೆ ಯಾರಿಗೂ ಅಸಮಾಧಾನಕ್ಕೆ ಅವಕಾಶ ದೊರೆಯುವುದಿಲ್ಲ. ಇದರಂತೆಯೇ ಸರ್ವಜ್ಞನಾದ ದೇವರಿಂದ ವಿಧಿಸಲ್ಪಟ್ಟ ಸನಾತನಧರ್ಮಗಳು ಜೀವರಿಗೆ ಈ ಲೋಕ ಪರಲೋಕದ ಸುಖದ ಮಾರ್ಗವನ್ನೇ ತಿಳಿಸುತ್ತಿರುವಾಗ ಅವುಗಳನ್ನ ನಮ್ಮ ದುಃಖಕ್ಕೆ ಕಾರಣವಾದದ್ದೆಂದು ತಿಳಿದರೆ ಅದು ನಮ್ಮ ಅವಿವೇಕವನ್ನೇ ಹೊರಪಡಿಸುತ್ತದೆ. ದೇವರ ಆಜ್ಞೆಯನ್ನು ಮೀರಿನಡೆದರೆ ಯಾರಿಗೂ ಈ ಲೋಕದಲ್ಲೂ, ಪರಲೋಕದಲ್ಲೂ ಸುಖವು ದೊರೆಯಲಾರದು; ಇಷ್ಟು ಮಾತ್ರವಲ್ಲದೇ ಮಹಾದುಃಖಕ್ಕೂ ಗುರಿಯಾಗಬೇಕಾಗುವುದು. ಈ ಭಾವವನ್ನೇ ಶ್ರೀ ಕೃಷ್ಣಪರಮಾತ್ಮನು ನೀಡಿ, ಇದು ಸಜ್ಜನರ ಅನುಭವವೇದ್ಯವಾದದ್ದೆಂದು ತಿಳಿಸಿದ್ದಾನೆ. ಇದನ್ನು ನಾವು ಸ್ವಲ್ಪವಾದರೂ ಅನುಭವಿಸಿಯೇ ಇತರರಿಗೆ ಪದೇಶಿಸಲು ಹೊರಟಿದ್ದೇವೆ. ಶಾಸ್ತ್ರೋಕ್ತವಾದ ವಿಷಯಗಳನ್ನು ಸರಿಯಾಗಿ ತಿಳಿದು ತನ್ನ ಯೋಗ್ಯತಾನುಸಾರ ಅನುಭವಕ್ಕೆ ತಂದುಕೊಂಡು ಉಪದೇಶ ಮಾಡುವವರು ( ಅಂದರೆ ಈಗಿನ ಕಾಲದಂತೆ theory)ಚನ್ನಾಗಿ ಅಭ್ಯಾಸ ಮಾಡಿ practicalನಲ್ಲೂ ಮುಂದುವರೆದು ಇತರರ ಮನಸ್ಸಿಗೆ ತಿಳಿಯುವಂತೆ ಉಪದೇಶ ಮಾಡುವ ಶಕ್ತಿ (capacity)ಉಳ್ಳವರೇ) ಆಚಾರ್ಯ ಎಂಬ ಹೆಸರನ್ನು ಹೊಂದಲು

ಯೋಗ್ಯರಾದವರು ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಈ ಭಾಗ್ಯವು ದೇವರ ಅನುಗ್ರಹಕ್ಕೆ ಪಾತ್ರರಾದವರಿಗೇ ಲಭ್ಯವಾಗುವುದು. ಪ್ರಕೃತ ಭಕ್ತಿದ್ವಾರಾ ದೇವರ ಅನುಗ್ರಹವನ್ನು ಸಂಪಾದನೆ ಮಾಡಬೇಕೆಂಬ ಅಪೇಕ್ಷೆ ಉಳ್ಳವರು ಮೊಟ್ಟಮೊದಲು ಅವನಲ್ಲಿ ವಿನಯಪ್ರದರ್ಶನವನ್ನು ಮಾಡಬೇಕು. ಲೋಕದಲ್ಲಿ ಮನುಷ್ಯರ, ಪ್ರಾಣಿಗಳ, ಸಸ್ಯ ಮೊದಲಾದವುಗಳ, ಅಭಿವೃದ್ಧಿಗಾಗಿಯೂ, ರಕ್ಷಣೆಗಾಗಿಯೂ, ಪೋಲೀಸ್, ಅಗ್ರಿಕಲ್ಚರಲ್, ಎಜುಕೇಶನ್, ಮೆಡಿಕಲ್, ಮಿಲಿಟರಿ, ಮುನಿಸಿಪಾಲಿಟಿ ಮೊದಲಾದ ಅನೇಕ ಇಲಾಖೆಗಳಿವೆ. ಆ ಎಲ್ಲಾ ಇಲಾಖೆಗಳ ಅವಶ್ಯಕತೆ ಇವತ್ತೇ ಇಲ್ಲ ದಿದ್ದರೂ ಒಂದಲ್ಲಾ ಒಂದು ದಿವಸ ಎಲ್ಲಾ ಇಲಾಖೆಗಳ ಉಪಯೋಗವನ್ನು ಹೊಂದುವ ಸಂದರ್ಭ ಬಂದೆ ಬರುವುದು . ಆದ್ದರಿಂದ ಎಲ್ಲಾ ಇಲಾಖೆಗಳ ಮರ್ಯಾದೆಯನ್ನು ಉಳಿಸಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಹಾಗೆವರ್ತಿಸುವವನೇ ವಿವೇಕಿ ಎನಿಸುವನು. ಎಲ್ಲಾ ಇಲಾಖೆಯಲ್ಲೂ ಉಚ್ಚ , ನೀಚಸ್ಥಾನಗಳು ಅದಕ್ಕೆ ತಕ್ಕ ಹೆಸರು, ಉಡುಪು, ಮರ್ಯಾದೆ, ಶಕ್ತಿ

(ಅಧಿಕಾರ ), ಸಂಬಳ ಮೊದಲಾದವುಗಳು ಇರುವುದು ಕಂಡುಬರುತ್ತವೆ. ಇದರಂತೆ ದೇವರನ್ನು ಹೊಂದುವ ಮಾರ್ಗವಾದ ವೇದಾಂತ ಸಾಮ್ರಾಜ್ಯದಲ್ಲಿಯೂ, ಉಚ್ಚನೀಚಸ್ಥಾನವೇ ಮೊದಲಾದದ್ದು ಇದೆ ಎಂದು ಒಪ್ಪಲೇಬೇಕಾಗಿದೆ. ಈ ವಿಷಯದಲ್ಲಿ ದೋಷ ಹೇಳಲು ಯಾರೂ ಸಮರ್ಥರಾಗಲಾರರು. ಒಂದು ಇಲಾಖೆಯವರು ಮತ್ತೊಂದು ಇಲಾಖೆಯವರಿಗೆ ಮರ್ಯಾದೆ ಮಾಡಲೇಬೇಕೆಂಬ ನಿಯಮವಿಲ್ಲದಿದ್ದರೂ. ಬೇರೆ ಇಲಾಖೆಯವರ ಸಹಾಯ ಒಂದಲ್ಲಾ ಒಂದು ದಿನ ಬೇಕೇಬೇಕಾಗುತ್ತದೆ ಎಂದು ತಿಳಿದು ವಿವೇಕಿಗಳು ಎಲ್ಲಾ ಇಲಾಖೆಯಲ್ಲಿರುವವರಿಗೂ ಮರ್ಯಾದೆ ಮಾಡುತ್ತಲೇ ಇರುವುದು ಕಂಡುಬರುತ್ತಿದೆ. ಈ ಮಾರ್ಗವನ್ನೇ ನಾವು

ಮುಂದುವರೆದು ಯೋಚಿಸಿದರೆ, ಒಂದಲ್ಲಾ ಒಂದು ದಿನ ಮರಣ ಹೊಂದಿ ದೈವಕ್ಲೃಪ್ತವಾದ ಧರ್ಮಾಧರ್ಮಗಳ ಫಲವನ್ನು ಹೊಂದುವುದಕ್ಕೋಸ್ಕರ ಯಮ, ಇಂದ್ರ ಮೊದಲಾದ ದೇವತೆಗಳ ಅಧೀನದಲ್ಲಿ ಹೋಗಿ ಬೀಳಲೇ ಬೇಕಾಗುತ್ತದೆ. ಆ ಮಾರ್ಗಕ್ಕೆ ಸಂಬಂಧ ಕೊಡುವ ಈ ಲೋಕದಲ್ಲಿರುವ ಭಿನ್ನ ಭಿನ್ನ ನೌಕರರ ಹೆಸರನ್ನು ಹೇಳುವ ಪದಗಳೇ ''ಜಾತಿ'' ಎಂಬ ಶಬ್ದದಿಂದ ಕರೆಸಿಕೊಳ್ಳುತ್ತಿವೆ. ಸರೆಯಾದ ವಿಚಾರವೇನೆಂದರೆ ದೇವರ ಸರ್ಕಾರದಲ್ಲಿ ಏರ್ಪಡಿಸಲ್ಪಟ್ಟ ಕ್ರಮಗಳೇ ಲೌಕಿಕ ಸರ್ಕಾರದಲ್ಲಿ ಅನುಕರಿಸಲ್ಪಟ್ಟಿವೆ. ಹೀಗಿರುವಲ್ಲಿ ಮಾನವರಲ್ಲಿ ಜಾತಿಭೇದವೇ ಇಲ್ಲವೆಂದು ಹೇಳುವುದು ಸರಿಯಲ್ಲ. ಸಸ್ಯ, ವೃಕ್ಷ ಕ್ರಿಮಿಕೀಟಗಳು, ಪಶು, ಪಕ್ಷಿ, ಜಡವಾದ ಲೋಹ, ಕಲ್ಲು ಮೊದಲಾದವುಗಳಲ್ಲೂ ಅವಾಂಥರಜಾತಿಗಳು ಇರುವಾಗ ಮಾನವರಲ್ಲಿ ಮಾತ್ರ ಅವಾಂತರಜಾತಿ (subdivision)ಗಳಿಲ್ಲ ಎಂದು ಹೇಳುವುದು ಹೇಗೆ ವಿವೇಕಿಗಳ ಮಾತಾಗುತ್ತದೆ? ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ನಾಲ್ಕು ವರ್ಣಗಳನ್ನು ಅವರುಗಳ ಗುಣಕರ್ಮಗಳನ್ನು ಸೃಷ್ಟಿಮಾಡಿದ್ದೇನೆಂದು ಹೀಳಿರುವನಷ್ಟೇ. ಅವನ ಅಭಿಪ್ರಾಯವೇನಿರಬೇಕೆಂದು ಯೋಚಿಸಿದರೆ,'' ನೀವು ನಾಲ್ಕುಜಾತಿಯವರು ನನ್ನ ಮಕ್ಕಳೇ ಆದ್ದರಿಂದ ಅಣ್ಣ ತಮ್ಮಂದಿರಂತೆ ಹೊಂದಿಕೊಂಡು ಕೆಲಸ ಮಾಡಿ ಶ್ರೇಯಸ್ಸನ್ನು ಹೊಂದಿರಿ'' ಎಂದು ಹೇಳಿದಂತೆ ಅಗುವುದಿಲ್ಲವೇ? ಅದೇ ಪರಮಾತ್ಮನ ಆಜ್ಞಾರೂಪವಾದ ಇತರಗ್ರಂಥಗಳನ್ನು ಪರಿಶೀಲಿಸಿದಾಗ ಈ ನಾಲ್ಕು ಜಾತಿಯಿಂದಲೇ ಸಾವಿರಾರು ಜಾತಿಗಳು ಹುಟ್ಟಿರುವಂತೆ ತಿಳಿದುಬರುತ್ತವೆ. ಈ ಸಂದರ್ಭದಲಿ ಮೇಲ್ಕಂಡ ನಾಲ್ಕು ಜಾತಿಯ ಬೆರೆಕೆಯಿಂದ(ವ್ಯಭಿಚಾರರಹಿತವಾದ ಶಾಸ್ತ್ರೋಕವಾದ ವಿವಾಹಕ್ರಮದಿಂದ ) ಹುಟ್ಟುವ ಅನುಲೋಮ, ಪ್ರತಿಲೋಮ ಎಂಬ ಹನ್ನೆರಡು(12) ಜಾತಿಯವರು ದೇವರಿಗೆ ಮೊಮ್ಮಕ್ಕಳಂತೆ ಇರುತ್ತಾರೆ. ಮೊದಲನೇ ಶುದ್ಧ ನಾಲ್ಕು ಜಾತಿಯನ್ನು

ಸೇರಿಸಿದಾಗ 16 ಜಾತಿಗಳಾಗುತ್ತವೆ. ಪುನಃ ಅವರುಗಳ ಬೆರೆಕೆಯಿಂದ 16★4=64 ಜಾತಿಗಳಾಗುತ್ತವೆ. ಅವರು ದೇವರ ಮರಿಮಕ್ಕಳಿಗೆ ಸದೃಶರಾಗವರು. ಅಲ್ಲಿಂದ ಮುಂದೆ ಸಾವಿರಾರು ಜಾತಿಗಳಾಗುತ್ತವೆ. ಮನೆಯ ಯಜಮಾನನು ತನ್ನ ಮಕ್ಕಳೇ ಮೊದಲಾದವರುಗಳಿಗೆ ಅವರವರ ಯೋಗ್ಯತಾನುಸಾರ (ಬುದ್ಧಿಶಕ್ತಿ, ಶಾರೀರ ಶಕ್ತಿಯನ್ನು ಅನುಸರಿಸಿ) ಒಂದೊಂದು ಕಾರ್ಯವನ್ನು ಹಂಚಿಕೊಡುವಂತೆ, ದೇವರು ಒಂದೊಂದು ಜಾತಿಯವರಿಗೆ ಒಂದೊಂದು ಕಾರ್ಯವನ್ನು ಹಂಚಿಕೊಟ್ಟಿರುತ್ತಾನೆ. ಇಷ್ಟಾದರೂ ಇಲ್ಲರೂ ಒಂದೇ ಕುಟುಂಬದವರೆಂಬುದನ್ನು ಮರೆಯಬಾರದು.ಸಂಸಾರದಲ್ಲಿ ನಿತ್ಯ ನಡವಳಿಕೆಯಲ್ಲಿ ಉಚ್ಚ, ನೀಚಭಾವಗಳಿಂದ ಅವರುಗಳು ಕೂಡಿದ್ದರೂ ತಮ್ಮ ಮನೆಗೆ ಕಳ್ಳರ ಭೀತಿ ಬಂದಾಗ ಎಲ್ಲರೂ ತಮ್ಮ ತಮ್ಮ ಭಿನ್ನ ಕರ್ತವ್ಯಗಳನ್ನು ಬಿಟ್ಟು ಒಂದಾಗಿ ಆ ಕಳ್ಳರನ್ನು ಎದುರಿಸುವರಷ್ಟೇ! ಹೀಗೆಯೇ ಒಂದು ದೇಶದಲ್ಲಿ ಅನೇಕ ಜಾತಿಯವರು ತಮ್ಮ ತಮ್ಮ ಭಿನ್ನ ಮರ್ಯಾದಾ- ಕರ್ತವ್ಯಗಳನ್ನು ರಕ್ಷಣೆಮಾಡಿಕೊಳ್ಳುತ್ತಿದ್ದರೂ,ತಮ್ಮ ದೇಶಕ್ಕೆ ಶತ್ರುಗಳು ಧಾವಿಸಿದಾಗ ಎಲ್ಲರೂ ಒಗ್ಗಟ್ಟಾಗಿ ಅವರನ್ನು ಎದುರಿಸಬೇಕಷ್ಟೆ ಇಷ್ಟು ಮಾತ್ರಕ್ಕೆ ಆವರವರ ಮರ್ಯಾದಾಕರ್ತವ್ಯಗಳು ಅಳಿಸಿ ಹೋಗುವುದಿಲ್ಲ. ಆ ಸಾವಿರಾರು ಜಾತಿಯ ಧರ್ಮಗಳನ್ನು ವಿಸ್ತಾರವಾಗಿ ತಿಳಿಯಬೇಕೆಂಬುವರು ಗ್ರಂಥಾಂತರಗಳನ್ನು ನೋಡಬೇಕು. ಸದ್ಯಕ್ಕೆ ನಾವು ಸರ್ವರಿಗೂ ಸಮಾನವಾದ (general qualification ನಂತೆ ಇರುವ) ಸಾರ್ವಜನಿಕಧರ್ಮವೆನಿಸಿದ ಸನಾತನಧರ್ಮಗಳನ್ನು ತಿಳಿಸುತ್ತೇವೆ. ಅಂತಹ ಧರ್ಮಗಳನ್ನು ದೇವರ ಪ್ರೀತಿಗೋಸ್ಕರ ಮಾಡುವವರೆಲ್ಲರೂ ( ಯಾವ ಜಾತಿಯವರಾದರೂ) ಒಂದು ರೀತಿಯಾದ ಬಂಧುಗಳೇ ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ನಾವುಗಳು ದೇವರನ್ನು ಹೊಂದುವ ಮಾರ್ಗವನ್ನು ತಿಳಿಸುವ ಆ ಭಿನ್ನ ಭಿನ್ನಧರ್ಮಗಳನ್ನು

ಮಾಡುತ್ತಿದ್ದರೂ ಅದಕ್ಕೆ ವಿರೋಧಿಗಳು ಬಂದಾಗ ನಾವೆಲ್ಲರೂ ಒಗ್ಗಟ್ಟಾಗಿ ಅವರನ್ನು ತಿರಸ್ಕರಿಸಬೇಕಾದದ್ದು ಭಕ್ತರಾದ ನಮ್ಮೆಲ್ಲರ ಧರ್ಮವೆಂದು ಹಿಂದೆ ತಿಳಿಸಿದ್ದೇವೆ.

ಮಹಮದ್ ಮತ್ತು ಏಸುಕ್ರಿಸ್ತನನ್ನು ದೇವರ ದೂತರೆಂದು ನಂಬಿ ಅವರನ್ನು ಅನುಸರಿಸುತ್ತಾ ಇರುವವರು ಅವರಿಗೆ ಸ್ವಲ್ಪ ಅವಮಾನಕರವಾಗಿ ಯಾರೇ ವರ್ತಿಸಿದರೂ ಅವರನ್ನು ಕೊಲ್ಲದೇ ಬಿಡಲಾರರು. ಆ ತಮ್ಮ ಗುರುವಿನ ಆಜ್ಞೆಯನ್ನು ಅವರು ಮೀರುವುದೂ ಇಲ್ಲ. ಹೀಗಿರುವಲಿಲ ನಾವು ಸಾಕ್ಷಾತ್ತಾಗಿ ದೇವರಿಂದಲೇ ವೇದಶಾಸ್ತ್ರಗಳ ದ್ವಾರಾ ಶಿಕ್ಷಿತರಾಗಿರುವೆವು. ಎಂದು ಹೇಳಿಕೊಳ್ಳುತ್ತಾ ಅವನ ಆಜ್ಞೆಯಂತೆ ಕೆಲಸಮಾಡದೇ, ಆ ದೇವರಿಗೆ ಅವಮಾನಕರವಾಗಿ ಮಾತನಾಡುವವರನ್ನು ಸಹಿಸಿಕೊಳ್ಳುತ್ತಿರುವಾಗ ನಾವು ದೇವರ ದ್ರೋಹಿಗಳಾಗುವುದಿಲ್ಲವೇ? ಇಂತಹ ನಮ್ಮಗಳ ರಕ್ಷಣೆಭಾರವನ್ನು ದೇವರು ಏಕೆ ವಹಿಸಬೇಕು? ಇದರಿಂದಲೇ ನಾವು ದಿನದಿನಕ್ಕೆ ಕಷ್ಟದ ಪರಿಸ್ಥಿತಿಗೆ ಇಳಿಯುತ್ತಿದ್ದೇವೆ. ಎಂಬುದನ್ನು ಮರೆಯಬಾರದು. ಈಗಲೂ ದೇವರಿಗೆ ಪ್ರೀತಿಕರರಾದ ಅವನ ಭಕ್ತರಿಗೆ ಪ್ರೋತ್ಸಾಹ ಕೊಡುತ್ತಾ; ದೇವರಿಗೂ, ದೇವರ ಆಜ್ಞಾ ರೂಪವಾದ ಗ್ರಂಥಗಳಿಗೂ, ದೇವರ ಭಕ್ತರಿಗೂ, ಅವಮಾನಕರವಾಗಿ ವರ್ತಿಸುವವರನ್ನು ಸದೆಬಡಿಯುತ್ತಾ ಇದ್ದರೆ; ದೇವರ ಅನುಗ್ರಹ ನಮಗೆ ದೊರಕಿ, ಮುಂದೆ ರಾಮರಾಜ್ಯದಲ್ಲೂ, ಪಾಂಡವರ ರಾಜ್ಯದಲ್ಲೂ ಪ್ರಜೆಗಳು ಸುಖಪಟಿತ್ತಿದ್ದಂತೆ ನಾವೂ ಸುಖವನ್ನು ಹೊಂದುವುದರಲ್ಲಿ ಸಂಶಯವೇ ಇಲ್ಲಾ. ''ಧರ್ಮೋ ರಕ್ಷತಿ ರಕ್ಷಿತಃ'' ಎಂಬಂತೆ ಈ ಕಲಿಯುಲಗದಲ್ಲೂ ನಮಗೆ ಸ್ವರಾಜ್ಯ ಬರುವುದಕ್ಕೆ ಮೊದಲು ಧರ್ಮಿಷ್ಠರಾದ ರಾಜರು ಸ್ವಲ್ಪ ಇದ್ದಿ ದ್ದರಿಂದ ಈ

ಕಾಲಕ್ಕಿಂತ ಆಗ ಹೆಚ್ಚಿಗೆ ಸುಖಪಡುತ್ತಾ ಇದ್ದದ್ದು ಸರ್ವರಿಗೂ ಅನುಭವವೇದ್ಯ ವಿಷಯವೇ ಆಗಿದೆ.

ದೇವರನ್ನು ಹೊಂದವ ಮಾರ್ಗವನ್ನು ತೋರಿಸುವ ಉತ್ತಮೋತ್ತಮ ಅ ಧಿ ಕಾರಿಗಳಾದ ದೇವತೆಗಳು, ಋಷಿಗಳೂ ಅನೇಕರಿದ್ದಾರೆ. ಅಲ್ಪಸಾಧನೆ ಮಾಡುವ ಮನುಷ್ಯರ ಮಧ್ಯದಲ್ಲಿ ಬ್ರಾಹ್ಮಣರಿಗೆ ಉತ್ತಮಸ್ಥಾನವು ಕೊಡಲ್ಪಟ್ಟಿದೆ.

ಈ ಮನುಷ್ಯಲೋಕದಲ್ಲಿ ಸಾವಿರಾರು ಜಾತಿಗಳಿವೆ. ಅವುಗಳ ಮಧ್ಯದಲ್ಲಿ ಅಂತ್ಯಜರು 16ನೇ ಜಾತಿಯವರಾದ್ದರಿಂದ ಅವರನ್ನು ಅತಿ ತಿರಸ್ಕಾರವಾಗಿ ಕಾಣುವವರು ಮಹಾ ಅವಿವೇಕಿಗಳೇ ಸರಿ. ಅದರಂತೆ ಬ್ರಾಹ್ಮಣರನ್ನು ಅತ್ಯುತ್ತಮರೆಂದು ತಿಳಿಯುವವರು ( ಅವರಿಗಿಂತ ಉತ್ತಮವಾದ ಋಷಿ, ಗಂಧರ್ವಮುಂತಾದ ಅನೇಕ ಜಾತಿಗಳಿರುವಾಗ ) ಅವಿವೇಕಿಗಳೇ ಸರಿ. ಈ ಶರೀರದ ಯಾವ ಜಾತಿಯೂ ಸ್ಥಿರವಲ್ಲವೆಂದು ಹಿಂದಯೇ ತಿಳಿಸಿದ್ದೇವೆ.ನೀಚರಾತಿಯವರು ದೇವರಿಗೆ ಪ್ರೀತಿಕರವಾದ ಉತ್ತಮ ಕಾರ್ಯಗಳನ್ನು ಮಾಡಿ ಉತ್ತಮಜಾತಿಯನ್ನು ಹೊಂದುವ ಪೂರ್ಣ ಅವಕಾಶ ಉಂಟು. ಉತ್ತಮಜಾತಿಯವರು ತಮ್ಮ ಕರ್ತವ್ಯಗಳನ್ನು ಬಿಟ್ಟಾಗಲೂ ಶಾಸ್ತ್ರವಿರುದ್ಧ ವಾಗಿಕಾರ್ಯ ಮಾಡುತ್ತಿರುವಾಗಲೂ ಕೆಳಗಿನ ಜಾತಿಗೆ ಇಳಿಯುವುದಕ್ಕೆ(degrade ಆಗುವುದಕ್ಕೆ ) ಅವಕಾಶ ಉಂಟು. ಆದ್ದರಿಂದ ನಾವು ಯಾವ ಜಾತಿಯವರೇ ಆಗಲಿ ದೇವರು ನಮಗೆ ತತ್ಕಾಲದಲ್ಲಿ ಕೊಟ್ಟಿರುವ ಜಾತಿಗೆ ಸಂತೋಷ ತಂದುಕೊಂಡು ಅವನು ನಮ್ಮಲ್ಲಿ ಪರಮಾನುಗ್ರಹ ಮಾಡಿರುವುದರಿಂದಲೇ, ತಾನು ಅವತಾರ, ಸಂಚಾರ ಮಾಡಿದ ದೇಶದಲ್ಲಿ ನಮಗೆ ಜನ್ಮ ಕೊಟ್ಟಿದ್ದಾನೆ ಎಂಬುದಾಗಿಯೂ, ಸಕಲಪಾಪಗಳನ್ನು ಪರಿಹಾರ

ಮಾಡುತ್ತಾ ಮುಕ್ತಿಗೆ ಸೋಪಾನದಂತೆ ಆಚರಿಸುವ ತನ್ನ ಮಹಿಮಾ ತೋರುವ ಕಥೆಗಳನ್ನು ಕೇಳುವ ಯೋಗವನ್ನು ಕೊಟ್ಟಿರುವಾಗ ಆ ಮಾರ್ಗದಲ್ಲಿ ಮುಂದುವರೆಯದೇ ಕೇವಲ ಹೊನ್ನು, ಹೆಣ್ಣು, ಮಣ್ಣುಗಳಿಗೆ ವಶರಾಗಿ ದೇವರ ಅನುಯಾಯಿಗಳೆಂದು ಯಾರು ತಾನೇ ಹೇಳಿ ಕೊಳ್ಳುತ್ತಾರೋ ದೇವರ ಅನುಯಾಯಿಗಳೆಂದು ಯಾರು ತಾನೇ ಹೇಳಿಕೊಳ್ಳುತ್ತಾರೋ ದೇವರ ಹೆಸರನ್ನೇ ಕಾಣದ ಅವರುಗಳನ್ನು ಅನುಸರಿಸುವುದು ಯಾವ ವಿವೇಕಿಗಳ ಕೆಲಸವಾಗುತ್ತದೆ. ಇಂತಹ ಶಿಕ್ಷಣಗಳನ್ನು ನಮ್ಮಲಿಲ ತಿಳಿದವರು ಇತರರಿಗೂ ತಿಳಿಸಬೇಕಾದದ್ದು ಕರ್ತವ್ಯವಾಗಿದೆ. ಹೀಗೆ ನಾವು ಯಾವ ಜಾತಿಯೂ ಶಾಶ್ವತವಲ್ಲವೆಂದು ತಿಳಿದಿರುವ ಬ್ರಾಹ್ಮಣರು-ತಮಗೆ ತಾವೇ ಉತ್ತಮತ್ವವನ್ನು ಹಿಂದೆಯೂ ಯಾವಾಗಲೂ ಹೇಳಿಲ್ಲ, ಈಗಲೂ ಹೇಳಿಕೊಳ್ಳುತ್ತಿಲ್ಲ. ದೇವರೇ ಅವರುಗಳಿಗೆ ಭೂಲೋಕದಲ್ಲಿ ಉತ್ತಮಸ್ಥಾನ ಕೊಟ್ಟಿರುವುದರಿಂದ ಆ ಮರ್ಯಾದಾರಕ್ಷಣೆಗಾಗಿ ಇಂದ್ರಾದಿದೇವತೆಗಳೂ, ಋಷಿಗಳೂ ಭೂಲೋಕದಲ್ಲಿ ಅವತಾರ ಮಾಡಿದಾಗ ಅವರಿಗೆ ಮರ್ಯಾದಾ ಸಲ್ಲಿಸುತ್ತಾರೆ. ದೇವರೂ ಅವತಾರ ಮಾಡಿದಾಗ ತಾನೂ ಮರ್ಯಾದಾ ಮಾಡುವವನಾಗುತ್ತಾನೆ. ಈ ದೇವರ ಅಭಿಪ್ರಾಯವನ್ನು ತಿಳಿದೇ ಕ್ಷತ್ರಿಯರಾದ ಮನ್ವಾದಿಗಳೂ ಬ್ರಾಹ್ಮಣರಿಗೆ ಮರ್ಯಾದಾ ಮಾಡುತ್ತಾ ತಾವು ಬರೆದಿರುವ ಧರ್ಮಶಾಸ್ತ್ರಗಳಲ್ಲೂ ಹಾಗೇ ಮಾಡುವಂತೆ ಜನಗಳಿಗೆ ಬೋಧಿಸುತ್ತಿದ್ದಾರೆ. ತಂದೆ ತಾಯಿಗಳು ರಾಜ ಮೊದಲಾದವರು ತಮ್ಮ ಕೈಕೆಳಗಿರುವ ನೌಕರರು ಮತ್ತು ಪ್ರಜೆಗಳು ಇವರುಗಳ ಯೋಗಕ್ಷೇಮವನ್ನು ಚೆನ್ನಾಗಿ ವಹಿಸಿ ನೋಡಿಕೊಳ್ಳುತ್ತಿದ್ದರೂ ಚಿಕ್ಕವರು ದೊಡ್ಡವರಿಗೆ ಮರ್ಯಾದೆ ಮಾಡುತ್ತಾ ಅವರ ಅಧೀನರಾಗಿಯೇ ವರ್ತಿಸಬೇಕೆಂದು ಬಲಾತ್ಕಾರಪಡಿಸಿದ ಮಾತ್ರಕ್ಕೇ ವೈಷಮ್ಯ ಮಾಡುವರೆಂದು ಯಾವ ವಿವೇಕಿಗಳೂ ತಿಳೀಯುವುದಿಲ್ಲ. ಹಾಗೆಯೇ

ಶ್ರೀಕೃಷ್ಣಪರಮಾತ್ಮನು ತನ್ನ ಮಕ್ಕಳಾದ ಎಲ್ಲಾ ಮನುಷ್ಯರ ಯೋಗಕ್ಷೇಮವನ್ನು ವಹಿಸಿ ಕೆಲಸ ಮಾಡುತ್ತಿದ್ದರೂ ಉಚ್ಚನೀಚಭಾವಗಳಿಗೆ ಅನುಗುಣವಾಗಿ ಚಿಕ್ಕವರು ದೊಡ್ಡವರಿಗೆ ಮರ್ಯಾದೆ ಮಾಡುತ್ತಾ ಅವರಿಂದ ವಿದ್ಯಾಬುದ್ಧಿಗಳನ್ನು ಕಲಿತು ತನ್ನ ವಿಶೇಷ ಅನುಗ್ರಹಕ್ಕೆ ಪಾತ್ರರಾಗಲೆಂಬ ಸದುದ್ದೇಶದಿಂದ ಬಲಾತ್ಕರಿಸಿದರೆ ಅದು ವೈಷಮ್ಯವಾಗುತ್ತದೆಯೇ ? ಈ ಮಂಗಳಕರವಾದ ದೇವರ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೊಳ್ಳದೇ ದುರ್ವೃತ್ತರಾದವರನ್ನು ದಂಡಿಸಿದಾಗ ದೇವರಿಗೆ ನಿಷ್ಕರುಣತೆ, ನಿರ್ದಯತ್ವ ಎಂಬ ದೋಷ ಬರುವುದೇ ? ಯಾರ ಮಾತನ್ನೋ ಕೇಳಿಕೊಂಡು ದೇವರನ್ನು ಕರುಣಾಸಮುದ್ರನೆಂದು ಕರೆಯುವುದಕ್ಕಿಂತ ಅವನು ಹೇಗೆ ಕರುಣಾಸಮುದ್ರ, ಪಕ್ಷಪಾತರಹಿತ ಮುಂತಾದವುಗಳನ್ನು ಸ್ವಲ್ಪವಾದರೂ ಅನುಭವಕ್ಕೆ ತಂದುಕೊಳ್ಳುವುದು ಭಕ್ತರ ಒಂದು ಕರ್ತವ್ಯವಾಗಿದೆ. ಹಾಗೇ ದೇವರ ಗುಣಗಳನ್ನು ಅನುಭವಕ್ಕೆ ತಂದುಕೊಳ್ಳಬೇಕೆಂದು ಬಯಸುವವರು ಎಲ್ಲಾ ದೇವರಿಂದಲೇ ಚೇತನಾಚೇತನಾತ್ಮಕ (ಜೀವ-ಜಡಾತ್ಮಕ)ವಾದ ಪ್ರಪಂಚವು ಸೃಷ್ಟಿಯಾಗಿರುವಾಗ ಯಾರು ಯಾರಿಗೆ ಯಾವು ಯಾವುದಕ್ಕೆ ಎಷ್ಟೆಷ್ಟು ಸ್ಥಾನಮಾನಗಳು ಕೊಡಲ್ಪಟ್ಟಿವೆ ಎಂಬುದನ್ನು ಚೆನ್ನಾಗಿ ತಿಳಿಯಬೇಕು. ಈ ಮಧ್ಯದಲ್ಲಿ ಬ್ರಾಹ್ಮಣ ಮೊದಲಾದ ನಾಲ್ಕು ಜಾತಿಯವರು ದೇವರಿಂದಲೇ ಸಾಕ್ಷಾತ್ ಹುಟ್ಟಿದವರೆಂದು, ಹಾಗೆಯೇ ಗುಣಕರ್ಮಗಳ ವಿಭಾಗದಿಂದ ಕೂಡಿದವರೆಂದು, ದೇವರು ಅಪರವರ ಕರ್ಮಾನುಸಾರ ಯಾವ ತರಹದ ಶಕ್ತಿಯನ್ನು ಇಟ್ಟಿದ್ದಾನೋ ಅದನ್ನೇ ಅಭಿವೃದ್ಧಿಗೊಳಿಸಿಕೊಂಡು ತನ್ನ ಸೇವೆ ಮಾಡಲಿ ಎಂಬ ಸದುದ್ದೇಶದಿಂದ ಭಿನ್ನ ಭಿನ್ನಜಾತಿಯವರಿಗೆ ಭಿನ್ನ ಭಿನ್ನ ಕರ್ಮಗಳನ್ನು ಆಜ್ಞಾಪಿಸಿದರೆ ಇದು ಪಕ್ಷ ಪಾತವೆಂದು ಯಾರು ತಾನೇ ಹೇಳಬಲ್ಲರು? ಹೀಗೆ ದೇವರ ಅಭಿಪ್ರಾಯದಂತೆ ಹಿಂದಿನ ಸಜ್ಜನರು ತಾರತಮ್ಯ

ಇಟ್ಟುಕೊಂಡು ಕೆಲಸ ಮಾಡುತ್ತಿದ್ದರೂ, ಈಗಿನ ವಾತಾವರಣದಲ್ಲಿ ಕೆಲವರು ಕುಹಕರು ತಂದೆ-ಮಗನಿಗೂ, ಅಣ್ಣತಮ್ಮಂದಿರೇ ಮೊದಲಾದವರಿಗೂ ಪರಸ್ಪರಕಲಹ ಹುಟ್ಟಿಸುವುದಕ್ಕೋಸ್ಕರ ಆ ಚಿಕ್ಕವರನ್ನು ಕುರಿತು ನೀನೇಕೆ ದೊಡ್ಡವರು ಹೇಳಿದಂತೆ ಕೇಳಿಕೊಂಡಿರಬೇಕು? ನಮ್ಮ ಜೊತೆಯಲ್ಲಿ ಬಂದರೆ ನೀನು ಸ್ವೇಚ್ಛೆಯಾಗಿ ಇರಬಹುದು. ದ್ರವ್ಯ, ಸ್ತ್ರೀ, ತಿಂಡಿ ಇವುಗಳ ಸುಖವನ್ನು ಹೆಚ್ಚಿಗೆ ಅನುಭವಿಸಬಹುದು ಎಂಬುದಾಗಿ ಬೋಧಿಸಿ ಒಂದು ಕುಟುಂಬದವರಾದ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಕಿರಾತ, ಶಬರ ಮೊದಲಾದ ಜಾತಿಯವರಾದ ) ನಮ್ಮಲ್ಲಿ ಅಂತಃಕಲಹವನ್ನು ಹುಟ್ಟಿಸುವುದಕ್ಕೋಸ್ಕರ ಜ್ಞಾನದುರ್ಬಲರಿಗೆ ಹೆಣ್ಣು, ಹೊನ್ನು, ಮಣ್ಣುಗಳ ಆಶೆಯನ್ನು ಹುಟ್ಟಿಸಿ ತಮ್ಮ ವಶಪಡಿಸಿಕೊಳ್ಳುತ್ತಾ ನಮ್ಮ ಕುಟುಂಬದಲ್ಲಿ ಅಂತಃಕಲಹಕ್ಕೂ ದೇವರ ದ್ರೋಹದ ರಚನೆಗೂ ಕಾರಣರಾಗುತ್ತಿದ್ದಾರೆ. ಅಂತಹವರು ಯಾವ ಉತ್ತಮಜಾತಿಯಲ್ಲಿ ಹುಟ್ಟಿದರೂ ಸ್ವರೂಪದಲ್ಲಿ ದೇವರ ದ್ರೋಹಿಗಳಾದ ದೈತ್ಯರೇ ಎಂದು ತಿಳಿಯಬೇಕು. ದೇವರ ಭಕ್ತರಾಗಬೇಕೆಂಬ ಆಶೆಯುಳ್ಳವರು, ಸಹವಾಸದಂತೆ ಗುಣ ಬರುತ್ತದೆ. ಆದ್ದರಿಂದ ಆಂತಹವರ ಸಹವಾಸಕ್ಕೆ ಹೆದರಬೇಕು. ಈ ಘೋರ ಕಲಿಯುಗದಲ್ಲಿ ಅಣ್ಣನ ಸ್ಥಾನ ಹೊಂದಿರುವ ಬ್ರಾಹ್ಮಣರು ಕಲಿಬಾಧೆಗೆ ಸಿಕ್ಕಿ ತಮ್ಮ ಜೀವನೋಪಾಯವನ್ನು ತಿಳಿಯದೆ ಸಂಕಟಪಡುತ್ತಿರುವಾಗ ತಮ್ಮ ಶ್ರೇಯಸ್ಸಿಗೂ ಪರರ ಶ್ರೇಯಸ್ಸಿಗೂ ಕಾರಣವಾದ ಜ್ಞಾನಸಂಪಾದನೆ ಮತ್ತು ಜ್ಞಾನೋಪದೇಶ ಮಾಡುವುದನ್ನು ಬಿಟ್ಟಿರುವುದು ಒಂದು ದೊಡ್ಡ ಅಪರಾಧವೇ ಸರಿ. ಎರಡನೆಯ ಅಣ್ಣನ ಸ್ಥಾನವನ್ನು ಹೊಂದಿರುವ ಕ್ಷತ್ರಿಯರಾದರೋ ನಷ್ಟ ಪ್ರಾಯರಾಗಿದ್ದಾರೆ. ಕಲಿಯುಗ ಮುಂದುವರೆದಾಗ ಸರಿಯಾದ ವೈಶ್ಯರೂ ಇಲ್ಲದಂತಾಗಿ ಬ್ರಾಹ್ಮಣ ಶೂದ್ರ ಎರಡೇ ಜಾತಿ ಉಳಿಯುವುದೆಂಬ ಭಾವವು ಶಾಸ್ತ್ರಗಳಿಂದ ದೊರೆಕುತ್ತಿದೆ.

ತಮ್ಮನ ಸ್ಥಾನವನ್ನು ಹೊಂದಿರುವ ಶೂದ್ರನು ಅತ್ಯಂತ ಹುಡುಗುಬುದ್ಧಿಯಿಂದ ಕೂಡಿರುವಾಗ, ಬುದ್ಧಿ ಹೇಳುವ ಮೂರು ಮಂದಿ ಅಣ್ಣಂದಿರೂ ದೊರಕದೇ ಇರುವ ಸಂದರ್ಭವೂ ಒದಗಿರುವಾಗ ಶತ್ರುವರ್ಗದವರು ಶೂದ್ರನಿಗೆ ಹೆಣ್ಣು, ಹೊನ್ನು, ಮಣ್ಣಿನ ಆಸೆಯನ್ನು ಹುಟ್ಟಿಸಿ ತಮ್ಮಕಡೆ ಅಂದರೆ ದೇವರ ವಿರುದ್ಧವಾದ ಮಾರ್ಗಕ್ಕೆ ಎಳೆಯುವ ಸಂದರ್ಭ ದೊರಕಿದೆ. ಆದ್ದರಿಂದ ಶೂದ್ರರ ಮಧ್ಯದಲ್ಲಿ ವಿವೇಕವಿಲ್ಲದವರು ತಂದೆಯಂತಿರುವ ದೇವರನ್ನು, ಅಣ್ಣಂದಿರಂತೆ ಇರುವ ಬ್ರಾಹ್ಮಣಾದಿಗಳನ್ನು ಧಿಕ್ಕಾರಮಾಡಿಕೊಂಡು, ಹೆಣ್ಣು, ಹೊನ್ನು, ಮಣ್ಣಿನ ಆಸೆಗಾಗಿ ಆ ಶತ್ರುಗಳ ವಶವಾಗುತ್ತಿರುವುದು ಕಂಡುಬರುತ್ತಿದೆ. ಚಿಕ್ಕ ತಮ್ಮಂದಿರಂತೆ ಇರುವ ಶೂದ್ರನ ಸ್ಥಿತಿಯೇ ಹೀಗಿರುವಾಗ ಮೊಮ್ಮಕ್ಕಳಂತೆ ಇರುವ ಅನುಲೋಮ ಪ್ರತಿಲೋಮ ಜಾತಿಯಲ್ಲಿ ಸೇರಿದ ಅಂತ್ಯಜರು (ಹರಿಜನರು) ಅವರಿಗಿಂತ ಕಮ್ಮಿ ಜಾತಿಯವರಾದ ಪುಲ್ಕಸ ಮೊದಲಾದವರು ಬೇಗ ಮೋಸಕ್ಕೆ ಗುರಿಯಾಗುವುದರಲ್ಲಿ ಏನು ಆಶ್ಚರ್ಯ?

ದೇವರ ಭಕ್ತರಾದ ಎಲ್ಲಾ ಜಾತಿಯವರು ಪರಸ್ಪರ ಬಂಧುಗಳೇ ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದರಿಂದ ಯಾವ ಜಾತಿಯವರೇ ಆದರೂ ದುಃಖಕ್ಕೆ ಗುರಿಯಾದರೆ, ನಮ್ಮ ಬಂಧೂಗಳು ದುಃಖಪಡುವ ಸ್ಥಿತಿ ಬಂದಾಗ ನಮ್ಮ ಮನಸ್ಸಿಗೆ ನೆಮ್ಮದಿ ಇಲ್ಲದೆ ನಾವು ಹೇಗೆ ಅವರ ದುಃಖವನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೋ, ಹಾಗೆಯೇ ನಾವು ಈಗಿನ ಜನಾಂಗದ ಪರಿಸ್ಥಿತಿಯನ್ನು (ಹಿತೋಪದೇಶಕರಿಲ್ಲದೇ ದುರ್ಜನರ ಮಾತಿಗೆ ಬೆರಗಾಗಿ ದೇವರಿಗೆ ವಿಮುಖರಾಗಿರುವುದನ್ನು ) ನೋಡಿ ಒಂದು ತರಹದ ದುಃಖಪಡುತ್ತಾ, ಅವರು ದೇವರ ಸೇವಾ ಮಾಡಿ ದುಃಸ್ಥಿತಿಯನ್ನು ಪರಿಹಾರ ಮಾಡಿಕೊಂಡು ಅವನ ಅನುಗ್ರಹದಿಂದ ಈ ಲೋಕದ ಪರಲೋಕದ ಸುಖಕ್ಕೆ

ಭಾಗಿಗಳಾಗಲಿ ಎಂಬ ಸದುದ್ದೇಶದಿಂದ ಅವರಿಗೆ ಸನ್ಮಾರ್ಗ ತೋರಿಸುವುದಕ್ಕೋಸ್ಕರ ಈ ಗ್ರಂಥದಲ್ಲಿ ಕೆಲವು ವಿಷಯಗಳನ್ನು ತಿಳಿಸುತ್ತೇವೆ.

ಕೆಲವರು ಎಲ್ಲರೂ ಒಟ್ಟಿಗೆ ಊಟ ಮಾಡೋಣ, ಮುಟ್ಟಿಸಿಕೊಳ್ಳೋಣ, ಇವುಗಳನ್ನು ಏಕೆ ಮಾಡಬಾರದು ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಉತ್ತರ–ವೈದಿಕ ಧರ್ಮವನ್ನು ತಿಳಿದವರು ಸಣ್ಣ ಸಣ್ಣ ಮಕ್ಕಳುಗಳನ್ನು ತಾವು ಮಡಿಯಲ್ಲಿರುವಾಗ ಮುಟ್ಟಿಸಿಕೊಳ್ಳುವುದಿಲ್ಲ. ದೊಡ್ಡವರಿಗೆ ವೃದ್ಧಿಸೂತಕಾದಿಗಳು ಬಂದಿರುವಾಗ ಅವರುಗಳ ಸ್ಪರ್ಶ ಮಾಡುವುದಿಲ್ಲ, ತನ್ನ ಅರ್ಧಾಂಗಿ ಎನಿಸಿದ ಪತ್ನಿಯು ಬಹಿಷ್ಠಳಾದಾಗ ಮುಟ್ಟಿಸಿ ಕೊಳ್ಳುವುದಿಲ್ಲ, ಬಂಧುಗಳು ಅತಿಪ್ರೀತಿಪಾತ್ರರಾದರೂ ಸಾಂಕ್ರಾಮಿಕ ರೋಗದಿಂದ ಕೂಡಿರುವಾಗ ಅವರುಗಳನ್ನು ಮುಟ್ಟಿಸಿಕೊಳ್ಳುವುದಿಲ್ಲ, ಇವುಗಳು ದ್ವೇಷಕಾರ್ಯವೆಂದು ಯಾವ ವಿವೇಕಿಗಳೂ ಒಪ್ಪುವುದಿಲ್ಲ. ಪ್ರಸ್ತುತ ಮುಟ್ಟಿಸಿಕೊಂಡ ಮಾತ್ರಕ್ಕೆ ಪ್ರೀತಿ ಇರುವುದೆಂದು, ಮುಟ್ಟಿಸಿಕೊಳ್ಳದಿದ್ದರೆ ದ್ವೇಷವೆಂದು ಹೇಳುವುದು ಸರಿಯಲ್ಲ. ಹೇನು ಮೊದಲಾದವುಗಳ ಸ್ಪರ್ಶ ನಮಗೆ ಇದ್ದರೂ ಅವುಗಳಲ್ಲಿ ಎಷ್ಟು ಪ್ರೀತಿ ಇರುತ್ತದೆ? ಅದೇ ದೇಶಾಂತರಕ್ಕೆ ಹೋಗಿರುವ ಮಗನಲ್ಲಿ ಪ್ರೀತಿ ನಷ್ಟವಾಗಿರುವುದೇ ಎಂಬುದನ್ನು ಗಮನಿಸಿದರೆ ಸ್ಪರ್ಶಾಸ್ಪರ್ಶವಿಷಯದಲ್ಲಿ ಅಸಮಾಧಾನಕ್ಕೆ ಅವಕಾಶವೇ ದೊರಕಲಾರದು.

ಶಾಸ್ತ್ರದ ಮರ್ಯಾದೆಯನ್ನು ಅನುಸರಿಸಿ ಹುಟ್ಟುವಾಗಲೇ ದೋಷದಿಂದ (ಪಾಪದಿಂದ) ಕೂಡಿರುವ ಜಾತಿಯವರನ್ನು, ಸಂಪರ್ಕದಿಂದ ಬಂದ ದೋಷವುಳ್ಳವರನ್ನು ಶುದ್ಧರಾದವರು ಮುಟ್ಟಿಸಿಕೊಳ್ಳಬಾರದೆಂಬುದು ಸನಾತನಧರ್ಮದಿಂದ ಕಂಡುಬರುತ್ತಿದೆ. ಸ್ನಾನ ಮಾತ್ರ ಸಾಕು, ಅದೇ ಮಡಿಯೆಂದು (ಶುದ್ಧಿಯೆಂದು) ಕೆಲವರು ಭಾವಿಸುತ್ತಾರೆ. ಅವರುಗಳಿಗೆ ಪಾದರಕ್ಷೆ ಉತ್ತರ ಕೊಡುತ್ತದೆ. ಹೇಗೆಂದರೆ, ಪಾದರಕ್ಷೆಯನ್ನು ಚೆನ್ನಾಗಿ

ತೊಳೆದುಕೊಂಡು ತಲೆಯಮೇಲೆ ಇಟ್ಟುಕ್ಕೋ ಎಂದರೆ ಅವನು ಏಕೆ ಒಪ್ಪುವುದಿಲ್ಲ? ಎಂದ ಮೇಲೆ ಕೆಲವರು ಮಡಿಯಲ್ಲಿರುವವರು ಮೈಲಿಗೆಯಾಗುತ್ತದೆಂದು ಹೇಳುತ್ತೀರಿ, ಅದೇ ಮೈಲಿಗೆಯವರು ಮಡಿಯವರನ್ನು ಮುಟ್ಟಿಸಿಕೊಂಡರೆ ಅವರು ಏಕೆ ಮಡಿಯಾಗುವುದಿಲ್ಲ ? ಎಂದು ಕೇಳುತ್ತಾರೆ. ಉತ್ತರವೇನೆಂದರೆ – ಒಳ್ಳೇ ಆರೋಗ್ಯ ಉಳ್ಳವನು, ಸಾಂಕ್ರಾಮಿಕರೋಗ ಉಳ್ಳವರನ್ನು ಮುಟ್ಟಿಸಿಕೋಂಡರೆ ಅವನಿಗೆ ರೋಗ ಏಕೆ ಬರುತ್ತದೆ? ಅದೇ ಸಾಂಕ್ರಾಮಿಕರೋಗ ಉಳ್ಳವನು ಆರೋಗ್ಯವಂತನನ್ನು ಮುಟ್ಟಿದಾಗ ರೋಗಿಯು ಏಕೆ ಅರೋಗ್ಯವಂತನಾಗುವುದಿಲ್ಲ? ಎಂದು ಕೇಳಿದರೆ ಏನು ಉತ್ತರ ಕೊಡುವರು. ಇದರಂತೆಯೇ ಅನ್ನ ಮೊದಲಾದ ಮುಸುರೆ ಪದಾರ್ಥಗಳನ್ನು ತಿನ್ನುವಾಗ ನಮ್ಮ ಹೊಟ್ಟೆ ಒಳಗೆಲ್ಲಾ ಮುಸುರೆಯಾಗುವುದಿಲ್ಲವೇ ? ಎಂದರೆ ಪದಾರ್ಥಗಳನ್ನು ಅಗ್ನಿಯಲ್ಲಿ ಹಾಕಿದಾಗ ಅದರ ಸ್ವರೂಪ ಬದಲಾಯಿಸುವುದಕ್ಕೆ ಹೇಗೆ ಅವಕಾಶ ಉಂಟೋ ಹಾಗೆಯೇ ಜಠರಾಗ್ನಿ–ಸಂಬಂಧವಾದಾಗ ಮುಸುರೆಯ ದೋಷ ನಷ್ಟವಾಗುತ್ತದೆ ಎಂದು ತಿಳಿಯಬೇಕು. ಹೀಗೆ ಮಡಿ, ಮೈಲಿಗೆ , ಎಂಜಲು, ಮುಸುರೆ ಮೊದಲಾದವುಗಳ ಮರ್ಯಾದೆಯನ್ನು ಮತ್ತು ಅವುಗಳ ಪರಿಹಾರದ ಮಾರ್ಗವನ್ನು, ಆವುಗಳು ಅತೀಂದ್ರಿಯಪದಾರ್ಥಗಳಾದ್ದರಿಂದ, ಶಾಸ್ತ್ರದೃಷ್ಟಿಯಿಂದಲೇ ತಿಳಿಯಬೇಕು, ಜಾತಿಗಳನ್ನು ನಿರ್ಮಾಣ ಮಾಡಿದ ದೇವರು ಯಾವ ಯಾವ ಗುಣದೋಷಗಳನ್ನು ನಿಮಿತ್ತ ಮಾಡಿ ಯಾವ ಯಾವ ಜಾತಿಗಳನ್ನು ನಿರ್ಮಾನ ಮಾಡಿದ್ದಾನೋ ಅವುಗಳ ಸ್ಪರ್ಶಾಸ್ಪರ್ಶದಿಂದ ಯಾವ ಗುಣ ದೋಷಗಳು ಸಂಕ್ರಾಂತವಾಗುತ್ತವೋ ಅವುಗಳನ್ನು ಪರಮಾತ್ಮನ ಆಜ್ಞಾನರೂಪವಾದ ಶಾಸ್ತ್ರದಿಂದಲೇ ತಿಳಿಯಬೇಕು. ಆದ್ದರಿಂದ ಭಿನ್ನ ಭಿನ್ನ ಜಾತಿಯವರು ಸ್ಪರ್ಶಾಸ್ಪರ್ಶಗಳನ್ನು ಸಹಭೋಜನವನ್ನು ಶಾಸ್ತ್ರದೃಷ್ಟಿಯಿಂದಲೇ

ಮಾಡಬೇಕೇ ವಿನಹ ಮನಸ್ಸಿಗೆ ಬಂದಂತೆ ಮಾಡಬಾರದು. ಆರೋಗ್ಯವನ್ನು ಬಯಸುವವರು ವೈದ್ಯರ ಮಾತಿನಲ್ಲಿ ವಿಶ್ವಾಸಉಳ್ಳವರಾಗಿ ಸಾಂಕ್ರಾಮಿಕರೋಗದವರನ್ನು ಮುಟ್ಟಿಸಿಕೊಳ್ಳದೇ ಇರುವುದು ಹೇಗೆ ದ್ವೇಷಕಾರಿಯಲ್ಲವೋ ಹಾಗೆಯೇ ಗುಣ ಕಮ್ಮಿ ಇರುವ ಜಾತಿಯವರನ್ನು ಸ್ಪರ್ಶ ಹೊಂದದೇ ಇರುವುದು ಜ್ಞಾನಾದ್ವಾರಾ ಸುಖಕ್ಕೆ ಕಾರಣವಾದ ಸಾಮಗ್ರಿಯೆಂದೇ ತಿಳಿಯಬೇಕೇ ವಿನಹ ಈ ಸನಾತನಧರ್ಮವು ದುಃಖಕ್ಕೆ ಕಾರಣವಾದದ್ದೆಂದು ವಿವೇಕಿಗಳು ಎಂದೂ ಭಾವಿಸಬಾರದು.

ಎಲ್ಲರ ಶರೀರದಲ್ಲಿಯೂ ರಕ್ತಮಾಂಸಾದಿಗಳೇ ಇರುವುದರಿಂದ ಅವಾಂತರ ಜಾತಿಬೇಧವನ್ನು ಏಕೆ ಒಪ್ಪಬೇಕು ?

ಉತ್ತರ : ಒಬ್ಬ ವ್ಯಕ್ತಿಗೆ ರಕ್ತಕೊಡುವ ಸಂದರ್ಭದಲ್ಲಿ ಯಾರ ಯಾರ ರಕ್ತವನ್ನು ಕೊಡಲು ವೈದ್ಯರು ಒಪ್ಪುವುದಿಲ್ಲ ಎಂದ ಮೇಲೆ ರಕ್ತದಲ್ಲಿ ಭೇದ ಉಂಟೆಂದು ತಿಳಿಯಬೇಕಾಗುವುದಲ್ಲವೇ.

ಒಟ್ಟು ಪ್ರಾಣಿವರ್ಗದಲ್ಲಿ ಅನೇಕ ಜಾತಿಗಳಿವೆ (84 ಲಕ್ಷ) ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದ್ದಾಗ ಮನುಷ್ಯ ಪಶು ಪಕ್ಷಿವೃಕ್ಷಾದಿಗಳಲ್ಲಿ ಆಕಾರ ಭೇದದಿಂದ ಜಾತಿಭೇದವನ್ನು ಒಪ್ಪಿದರೂ ಮನುಷ್ಯರ ಮಧ್ಯದಲ್ಲಿ ಆ ತರಹ ಆಕಾರಭೇದ ಕಣ್ಣಿಗೆ ಕಾಣಿಸುವುದಿಲ್ಲವಾದ್ದರಿಂದ ಮನುಷ್ಯರಲ್ಲಿ ಅವಾಂತ ಜಾತಿಗಳನ್ನು ಏಕೆ ಒಪ್ಪಬೇಕು?

ಉತ್ತರ : ಯಂತ್ರವೇ ಮೊದಲಾದ ವಸ್ತುಗಳಲ್ಲಿ ಆಕಾರಭೇದವಿಲ್ಲದಿದ್ದರೂ ಆ ಪದಾರ್ಥಗಳ ಗುಣಮೂಲಕವಾದ (ಬಾಳಿಕೆ Durability) ಅವಾಂತರ ಜಾತಿಭೇದವನ್ನು ಆ ವಸ್ತುಗಳಲ್ಲಿಯೂ ತಿಳಿದುಕೊಂಡು ಅವುಗಳ ಬೆಲೆಯನ್ನು ವ್ಯತ್ಯಾಸ ಮಾಡಿಕೊಳ್ಳುತ್ತೇವಷ್ಟೇ. ಮನುಷ್ಯರಲ್ಲಿ ಕಣ್ಣಿಗೆ ಕಾಣಿಸುವ ಆಕಾರಭೇದ ದೊರಕದಿದ್ದರೂ ಮನುಷ್ಯರಿಗೆ ದೇವರು ಇತರ ಪ್ರಾಣಿಗಳಿಗೆ ಕೊಡದೆ ಇರುವ

ಬುದ್ಧಿಶಕ್ತಿಯನ್ನು ಕೊಟ್ಟಿರುವುದರಿಂದ ಆ ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಂಡು ಶಾಸ್ತ್ರದಲ್ಲಿ ಹೇಳಿರುವಗುಣಕ್ಕೆ ಅನುಗುಣವಾದ ಅವಾಂತರ ಜಾತಿ, ಅವುಗಳ ಉಚ್ಚ-ನೀಚ ಭಾವ (Gradation)ವನ್ನು ಒಪ್ಪಲೇಬೇಕು. ಇದಕ್ಕೆ ಒಂದೆರಡು ದೃಷ್ಟಾಂತಗಳು –

ಅ) ನಿಂಬೆ, ಚಕ್ಕೋತ, ಮೋಸಂಬಿ, ಹೇರಳೆ, ಕಿತ್ತಳೆ ಮೊದಲಾದ ಗಿಡಗಳ ಆಕಾರಗಳು ಒಂದೇ ತರಹ ಕಣ್ಣಿಗೆ ಕಂಡರೂ, ಆ ಗಿಡದ ಬೀಜವನ್ನು ಹುಟ್ಟುಹಾಕಿದವರು ಅಥವಾ ಆ ಗಿಡದ ಫಲದ ರಸಾಸ್ವಾದನೆ ಮಾಡಿದವರು ಅದರ ಭೇದವನ್ನು ತಿಳಿದಿರುವಂತೆ, ಸೃಷ್ಟಿಮಾಡಿದ ದೇವರು ಮತ್ತು ಅವುಗಳ ಗುಣಗಳನ್ನು ತಿಳಿದ ಜ್ಞಾನಿಗಳು ಸ್ಪಷ್ಟವಾಗಿ ಅವಾಂತರ ಜಾತಿಭೇದವನ್ನು ಒಪ್ಪೇ ಒಪ್ಪುತ್ತಾರೆ. ಇತರರು ಅವರುಗಳ ಮಾತಿನಲ್ಲಿ ವಿಶ್ವಾಸವುಳ್ಳವರಾಗಿ ನಂಬಬೇಕಾಗುತ್ತದೆ.

ಆ ) ಗಡಿಯಾರವೇ ಮೊದಲಾದ ಯಂತ್ರಗಳು ನೋಡುವುದಕ್ಕೆ ಒಂದೇ ತರಹ ಕಂಡರೂ ಅವುಗಳ ಬಾಳುವಿಕೆ (Durability)ಗೆ ಕಾರಣವಾದ ಜ್ಯೂಯಲ್‌ಗಳ ಅಳವಡಿಕೆಯ ಮೇಲೆ. ಅವುಗಳ ಬೆಲೆ ವ್ಯತ್ಯಾಸವಾಗುವಂತೆ , ಮನುಷ್ಯರಲ್ಲೂ ಉತ್ತಮಗುಣಕಾರ್ಯಗಳಿಗೆ ಕಾರಣವಾದ ಸತ್ವಗುಣದ ನ್ಯೂನಾಧಿಕಬಾವವನ್ನು ಅನುಸರಿಸಿ ಆಯಾ ಜಾತಿಯ ಮರ್ಯಾದೆಗಳನ್ನು ಸೃಷ್ಟಿಕರ್ತನಾದ ದೇವರಿಂದಲೋ ಅಥವಾ ದೇವರ ಅನುಗ್ರಹಕ್ಕೆ ಪಾತ್ರರಾಗಿ ಅವುಗಳನ್ನು ಸಾಕ್ಷಾತ್ತಾಗಿ ನೋಡುತ್ತಿರುವ ಜ್ಞಾನಿಗಳ ಮಾತಿನಿಂದಲೋ ತಿಳಿಯಬೇಕೇ ವಿನಹ, ಕೇವಲ ನಮ್ಮ ನೋಟದಿಂದ ತಿಳಿಯಲು ಶಕ್ಯವಲ್ಲ.

ಸತ್ವ, ರಜಸ್ಸು, ತಮೋಗುಣಗಳಿಂದಲೇ ಜಗತ್ತಿನಲ್ಲಿರುವ ಚೇತನಾ ಚೇತನಾತ್ಮಕವಾದ (ಚೇತನ, ಜೀವನ ಶರೀರ ) ಎಲ್ಲಾ ಪದಾರ್ಥಗಳು ನಿರ್ಮಿತವಾಗಿದ್ದರೂ ಸುಖ ಬಯಸುವವರು, ಶಾಶ್ವತ ಸುಖಕ್ಕೆ, (ಮೋಕ್ಷಕ್ಕೆ )

ಕಾರಣವಾಗುವ ಸಾತ್ವಿಕಗುಣ ಹೆಚ್ಚಿಗೆ ಇರುವ ಪದಾರ್ಥಗಳಿಗೆ ತಮ್ಮ ತ್ರಿಕರಣಗಳಿಂದ (ಅಂದರೆ ಕಾಯಿಕ, ವಾಚನಿಕ, ಮಾನಸಿಕ ವ್ಯಾಪಾರಗಳಿಂದ ) ಹೆಚ್ಚಿಗೆ ಮರ್ಯಾದೆ ಮಾಡಬೇಕು. ಈ ಸಂದರ್ಭದಲ್ಲಿ ನಾವು ಸತ್ತ್ವ, ರಜಸ್ಸು ತಮೋಗುಣಗಳೆಂದು ಕರೆಯುವುದು ಸೂಕ್ಷ್ಮ ದ್ರವ್ಯಗಳೇ ವಿನಹ, ಬಿಳಿ, ಕಪ್ಪು ಮುಂತಾದಂತಹ ರೂಪವಾದದ್ದಲ್ಲ. ಹೀಗಿರುವಾದ ಸತ್ತ್ವಗುಣ ಅತ್ಯಧಿಕವಾಗಿ ಉಳ್ಳ ದೇವತೆಗಳು, ಋಷಿಗಳು ದೂರವಿದ್ದರೂ ಮನುಷ್ಯಲೋಕದಲ್ಲಿ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಸಂಕರಜಾತಿಗಳಲ್ಲಿ ಸತ್ತ್ವಗುಣ ಕ್ರಮವಾಗಿ ಕಮ್ಮಿ ಆಗುತ್ತಾ ಬರುವುದರಿಂದ ಒಬ್ಬರಿಗಿಂತ ಒಬ್ಬರು ಅವರರೆಂದು (ಕಡಿಮೆ ಎಂದು ) ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಹೇಗೆ ನಾವು ಲೋಹ ಮೊದಲಾದವುಗಳಲ್ಲಿ ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ ಗಳು (Electron, Proton, Neutron ಗಳು) ಮೇಳನವ್ಯತ್ಯಾಸದಿಂದ ಇದೆಯೆಂದು ತಿಳಿದಿದ್ದರೂ, ಅದನ್ನು ಮಾರ್ಪಾಡು ಮಾಡಲಾರೆವೋ, ಅದರಂತೆ ಇಲ್ಲೂ ಸತ್ತ್ವ, ರಜಸ್ಸು, ತಮೋಗುಣಗಳ ಮೇಳನವ್ಯತ್ಯಾಸದಿಂದ ನಡೆದಿರುವ ಜಾತಿಯ ಭೆದವನ್ನು ಮಾರ್ಪಾಡು ಮಾಡಲು ಆಗುವುದಿಲ್ಲ ಎಂದು ಭಾವಿಸಬೇಕು. ಆದ್ದರಿಂದ ಸುಖ ಬಯಸುವವರು., ಸೃಷ್ಟಿಕರ್ತನಾದ ದೇವರು ಎಲ್ಲೆಲ್ಲಿ ಎಷ್ಟೆಷ್ಟು ಸತ್ತ್ವ, ರಜೋ, ತಮೋಗುಣಗಳನ್ನು ಇಟ್ಟಿದ್ದಾನೆಂಬುದನ್ನು ಅವನ ಆಜ್ಞಾರೂಪವಾದ ಶಾಸ್ತ್ರದಿಂದಲೇ ತಿಳಿದು ಆಜ್ಞಾನ, ಆಲಸ್ಯ, ನಿದ್ರಾ ಮೊದಲಾದ ವುಗಳಿಗೆ ಕಾರಣವಾದ ತಮೋಗುಣ ಪದಾರ್ಥಗಳನ್ನೂ, ಸ್ವಲ್ಪ ಸುಖ ಕೊಡುವ ಹಾಗೂ ಹೆಚ್ಚು ದುಃಖಕ್ಕೆ ಕಾರಣವಾದ ರಾಜಸಪದಾರ್ಥಗಳನ್ನೂ ದೂರ ಮಾಡಿಕೊಂಡು, ಉತ್ತಮಸುಖಕ್ಕೆ ಜ್ಞಾನದ್ವಾರಾ ಶಾಶ್ವತಸುಖಕ್ಕೂ ಕಾರಣವಾದ ಸತ್ವಗುಣ ಹೆಚ್ಚಿಗೆ ಸತ್ತ್ವಗುಣವುಳ್ಳ ಮನುಷ್ಯರ ಸಹವಾಸವನ್ನು ಮಾಡುತ್ತಾ ಇರಬೇಕು. ಔಷಧಿಪದಾರ್ಥಗಳಲ್ಲಿ

ಯಾವುದನ್ನು ಹೇಗೆ ಯಾವಾಗ, ಎಷ್ಟು ಉಪಯೋಗಿಸಿಕೊಳ್ಳಬೇಕೆಂಬುದನ್ನು ವೈದ್ಯರ ದ್ವಾರಾ ತಿಳಿದು ಉಪಯೋಗಿಸಿಕೊಂಡರೆ ಆರೋಗ್ಯಕ್ಕೆ ಕಾರವಾಗುವುದೋ ಅದರಂತೆ ಪರಮಾತ್ಮನ ಅಭಿಪ್ರಾಯವನ್ನು ತಿಳಿದ ಮನ್ವಾದಿಗಳು ಯಾವ ಯಾವ ಪದಾರ್ಥವನ್ನು ಹೇಗೆ ಸೇವನೆ ಮಾಡಬೇಕೆಂದು ತಿಳಿಸಿರುತ್ತಾರೋ ಅದರಂತೆ ಚೇತನಾಚೇತನಾತ್ಮಕವಾದ ಪದಾರ್ಥಗಳನ್ನು ಉಪಯೋಗಿಸಿ ಕೊಂಡರೆ ಭವ (ಸಂಸಾರ) ರೋಗಕ್ಕೂ ಔಷಧವೆನಿಸಿ ಮಹಾಸುಖವಾದ ಮೋಕ್ಷಕ್ಕೆ ಕಾರಣವೆನಿಸುವುದು.

ಲೋಕದಲ್ಲಿ ಒಂದೊಂದು ಇಲಾಖೆಯವರು ತಮ್ಮ ಇಲಾಖೆಯವರಿಗೆ ಒಂದೇ ತರಹದ ಉಡುಪುಗಳನ್ನು ಕೊಟ್ಟಿರುವಾಗ ಅದನ್ನು ಧಾರಣ ಮಾಡಿದ ಮಾತ್ರಕ್ಕೆ ಒಂದೇ ತರಹ ಕಂಡರೂ ಅವರುಗಳ ಮೈಬಣ್ಣ, ಸ್ವಭಾವ, ಬಲಾದಿಗಳು ಎಲ್ಲರಲ್ಲೂ ಒಂದೇ ತರಹ ಕಂಡುಬರಲಾರದು. ಹಾಗೆಯೇ ಮನುಷ್ಯರೆಲ್ಲರಿಗೂ ಕರಚರಣಾದಿಅವಯವಗಳು, ರಕ್ತ ಮಾಂಸಾದಿಗಳು ಒಂದೇ ತರಹ ಕಂಡುಬಂದರೂ, ದಯಾ, ಕ್ರೌರ್ಯ, ಆಸ್ತಿಕ್ಯ, ನಾಸ್ತಿಕ್ಯ ಮೊದಲಾದ ಬುದ್ಧಿಗಳು ಒಂದೇ ತರಹ ಇರುವುದಿಲ್ಲ. ಆದ್ದರಿಂದ ಎಲ್ಲರನ್ನೂ ಸಮಾನಜಾತಿಯವರನ್ನಾಗಿ ಪರಿಗಣಿಸುವುದು ಸಾಧ್ಯವಲ್ಲದ ವಿಚಾರ. ಹಿಂದಿನ ಸುಸಂಸ್ಕೃತವಾದ ಸುಬುದ್ಧಿಯುಳ್ಳ ಪ್ರಜೆಗಳು ತಮಗಿಂತ ಉತ್ತಮಜಾತಿಯವರಿಗೆ ಮರ್ಯಾದೆ ದೊರೆತಾಗ ಸಂತೋಷಪಡುವ ಭಾಗ್ಯ ಉಳ್ಳವರಾಗಿದ್ದರು. ಈಗಿನ ಕಲಿಯುಗದ ಕುಹಕರ ಹೇಳಿಕೆಗೆ ಮನಸೋತಾಗ ಅಸಮಾಧಾನಪಡುವ ಸ್ಥಿತಿಯು ಬಂದಿದೆ. ಸುಖಪಡುವ ಯೋಗದಲ್ಲಿ ದುಃಖಪಡುವಂತೆ ಮಾಡುವುದೇ ದುರ್ಜನರ ಲಕ್ಷಣ. ಪ್ರಕೃತ ಬ್ರಾಹ್ಮಣಾದಿ ಈ ನಾಲ್ಕು ಜಾತಿಯವರು ಭಿನ್ನ ಭಿನ್ನ ಮರ್ಯಾದಾಕರ್ತವ್ಯಗಳಿಂದಕೂಡಿದ್ದರೂ ಸಹೋದರರ ಭಾವವನ್ನು ಮರೆಯದೆ ಸುಖಪಡಲಿ ಎಂಬ ಸದುದ್ದೇಶದಿಂದ ಗುಣಕರ್ಮರೂಪವಾದ

ಕರ್ತವ್ಯಗಳಿಂದ ಕೂಡಿಕೊಂಡೇ ನಾಲ್ಕು ಜಾತಿಗಳು ನನ್ನಿಂದ ಸೃಷ್ಟಿಯಾಗಿದೆ ಎಂದು ಶ್ರೀಮದ್ಭವದ್ಗೀತೆಯಲ್ಲಿ ಪರಮಾತ್ಮನು ಅಪ್ಪಣೆ ಕೊಡಿಸಿದ್ದಾನೆ. ದೇವರಿಂದ ನಿರ್ಮಿತವಾದ ಅನೇಕ ಜಾತಿಗಳಿದ್ದರೂ, ಅವರಿಂದಲೇ ಕ್ಲೃಪ್ತವಾದ ಸ್ಥಾನಮಾನಗಳಿಗೆ ಅನುಗುಣವಾಗಿ ವರ್ತಿಸದೆ, ದೃಷ್ಟಾಂತಕ್ಕೆ 16ನೇ ಜಾತಿಯವನಾದ ಅಂತ್ಯಜನಿಗಿಂತ, ಅನೇಕ ನೂರಾರು ಗುಣ ಕಮ್ಮಿಯಾದ ಕಿರಾತ, ಹೂಣ, ಮ್ಲೇಂಛಾದಿ ಜಾತಿ ಯವರಿಗೆ ಅಂತ್ಯಜನಿಗಿಂತ ಹೆಚ್ಚಿಗೆ ಮರ್ಯಾದೆ ಮಾಡುವವರು ದೇವರಿಂದ ಕ್ಲೃಪ್ತವಾದ ಜಾತಿಮರ್ಯಾದೆಯನ್ನು ಕೆಡಿಸಿದವರಾಗಿ ಪಾಪಕ್ಕೆ ಭಾಗಿಗಳಾಗುವರು.

ಹೀಗೆ ಜಾತಿಯ ಸ್ಥಾನಮಾನಗಳನ್ನು ರಕ್ಷಣೆ ಮಾಡುವ ಸಂದರ್ಭದಲ್ಲಿ ತಾನು ತನ್ನ ಜಾತಿಯ ಸ್ಥಾನಮಾನವನ್ನು ರಕ್ಷಣೆ ಮಾಡಿಕೊಳ್ಳುವುದು ಮೊದಲನೆಯ ಕರ್ತವ್ಯವಷ್ಟೆ. ಈ ಲೋಕದಲ್ಲಿ ಅಧಿಕಾರಿಗಳು, ಅಸಮರ್ಥನಾದ ನೌಕರನನ್ನು ಕುರಿತು, ನೀನು ಕೆಲಸಮಾಡದಿದ್ದರೂ, ನೀನು ಸ್ಥಾನದಲ್ಲಿ (seat) ಮಾತ್ರ ಇದ್ದರೂ, ನಿನ್ನ ಯೋಗಕ್ಷೇಮವನ್ನು ವಹಿಸಿಕೊಳ್ಳುತ್ತೇವೆ ಎನ್ನುವಂತೆ. ದೇವರು, ಸ್ಥಾನಕ್ಕೆ ಸದೃಶವಾದ ಅವರವರ ಜಾತಿಯಲ್ಲೇ ಇದ್ದು ಕರ್ತವ್ಯದಲ್ಲಿ ಕೊರತೆಯಿದ್ದರೂ ಅವರ ಯೋಗಕ್ಷೇಮವನ್ನು ವಹಿಸುವನು. ಆದರೆ ನೌಕರನು ತನ್ನ ಸ್ಥಾನವನ್ನೇ ಬಿಟ್ಟು ಹೋದರೆ ಹೇಗೆ ಅಪರಾಧಿ ಎನಿಸುವನೋ ಹಾಗೆಯೇ ಜಾತಿ ಕಳೆದು ಕೊಂಡವರು ದೊಡ್ಡ ಅಪರಾಧಿಗಳೆನಿಸುವರು. ಉತ್ತಮ ಕೆಲಸ ಮಾಡುವ ಶಕ್ತಿಯುಳ್ಳವನು ಕ್ರಮವಾಗಿ ದೊಡ್ಡವರನ್ನು ಪ್ರಾರ್ಥಿಸಿಕೊಂಡು ಉತ್ತಮ ಸ್ಥಾನವನ್ನು ಮುಂದೆ ಹೊಂದುವುದಕ್ಕೆ ಪೂರ್ಣ ಅವಕಾಶ ಉಂಟಾದರೂ ನೀಚಸ್ಥಾನದಲ್ಲಿ (ಕಮ್ಮಿ ಜಾತಿ ) ರುವಾಗಲೇ ದೊಡ್ಡವರ ಕೆಲಸವನ್ನು ಮಾಡುವುದಕ್ಕೆ ಕೈಹಾಕಿದರೆ ಅಪರಾಧಕ್ಕೆ ಗುರಿಯಾಗಿ ಅವಿಧೇಯನೆನಿಸಿ, ಇರುವ ಕೆಲಸವನ್ನು ಕಳೆದುಕೊಳ್ಳುವ ಯೋಗ ಬರುವುದು.

ಇದರಂತೆ ಉತ್ತಮ ಸ್ಥಾನದಲ್ಲಿರುವವರು, ನೀಚಸ್ಥಾನದವರ ಕೆಲಸವನ್ನು ಮಾಡುವುದಕ್ಕೆ ಹೊರಟಾಗಲೂ ಶಿಕ್ಷೆಗೆ ಗುರಿಯಾಗುವರು. ಇದರಂತೆ (ದೇವರನ್ನು ಹೊಂದುವ ಮಾರ್ಗದಲ್ಲೂ ) ವೈದಿಕ ಸಾಮ್ರಾಜ್ಯದಲ್ಲೂ ಉಚ್ಚನೀಚ ಭಾವದಿಂದ ಕೂಡಿರುವವರು ಮತ್ತೊಬ್ಬರ ಕೆಲಸ ಮಾಡುವುದಕ್ಕೆ ಹೋದಾಗ ದುಃಖಕ್ಕೆ ಭಾಗಿಗಳಾಗುವವರೆಂದು ಶ್ರೀಕೃಷ್ಣಪರಮಾತ್ಮನು ತಿಳಿಸಿದ್ದಾನೆ.

ಕೆಲವರು ಶಾಸ್ತ್ರಗಳಲ್ಲಿ ಜಾತಿಭೇದ ಹೇಳಿಲ್ಲವೆಂದು ಹೇಳುತ್ತಾರೆ. ಮತ್ತೆ ಕೆಲವರು ಹುಟ್ಟಿನಿಂದ ಜಾತಿಭೇದ ಇಲ್ಲವೆಂದೂ, ಅವರವರ ಕೆಲಸದಂತೆ ಜಾತಿಭೇದಗಳು ಜಗತ್ತಿನಲ್ಲಿ ವ್ಯವಹಾರ ಮಾಡಲ್ಪಡುತ್ತಿವೆ. ಎಂದು ಹೇಳುತ್ತಾರೆ. ಮತ್ತೆ ಕಲವರು ಬ್ರಾಹ್ಮಣರೇ ತಮಗೆ ಉತ್ತಮತ್ವ ಹೇಳಿ ಕೊಳ್ಳುವುದಕ್ಕೋಸ್ಕರ ಈ ಜಾತಿಭೇದವನ್ನು ಕಲ್ಪಿಸಿ ಜನಗಳಿಗೆ ಮೋಸಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಇದ್ಯಾವುದೂ ಸರಿಯಲ್ಲ, ಏಕೆಂದರೆ ಕರ್ಮದಿಂದಲೇ ಜಾತಿಭೇದವಾಗುತ್ತಿದ್ದರೆ ನಾವೇ ಅದನ್ನು ಬದಲಾಯಿಸಿಕೊಳ್ಳಬಹುದು. ಅದು ಹಾಗಲ್ಲದೆ, ನಾವು ಹಿಂದೆ ಹೇಳಿದಂತೆ ಪರಮಾಣುಗಳಿಗಿಂತಲೂ ಅತಿಸೂಕ್ಷ್ಮವಾದಂತಹ ಸತ್ವ, ರಜಸ್, ತಮೋಗುಣಗಳ ಮೇಳನವ್ಯತ್ಯಾಸಗಳೇ ಜಾತಿಭೇದಕ್ಕೆ ಕಾರಣವಾದ್ದರಿಂದ ಆ ಗುಣಗಳ ದಿಕ್ಕೇಕಾಣದ ಮನುಷ್ಯರು ಒಂದೇ ಜಾತಿಯನ್ನು ಮಾಡುವುದು ಹೇಗೆ ?

ಮನ್ವಾದಿಶಾಸ್ತ್ರಕರ್ತರು, ಸ್ವಯಂಕ್ಷತ್ರಿಯರಾಗಿ, ಬ್ರಾಹ್ಮಣರಿಗೆ ತಮಗಿಂತ ಉತ್ತಮತ್ವವನ್ನು ತಮ್ಮ ಗ್ರಂಥದಲ್ಲಿ ಹೇಳಿರುವುದನ್ನು ಗಮನಿಸಿದಾಗ ಬ್ರಾಹ್ಮಣರು ಸ್ವಾರ್ಥದಿಂದ ಈ ಜಾತಿಭೆದವನ್ನು ಮಾಡಿಲ್ಲವೆಂದು ತಿಳಿಯುವುದಿಲ್ಲವೇ ! ಅಧುನಿಕರು ಹೇಳುವಂತೆ ನಮ್ಮ ಆಚರಣೆಯಲ್ಲಿ ಒಂದು ಮೆಟ್ಟಲಿಗೆ ಬಂದಾಗ ಬ್ರಾಹ್ಮಣರಾಗಬಹುದಾಗಿದ್ದರೆ ಅಥವಾ ನಾವೇ ಜಾತಿ ಸಂಪಾದನೆ ಮಾಡುವ

ಸಾಮರ್ಥ್ಯವುಳ್ಳ ಪಕ್ಷಕ್ಕೆ , ವಿಶ್ವಾಮಿತ್ರಋಷಿಗಳು ಆ ಸುಲಭಮಾರ್ಗವನ್ನು ಬಿಟ್ಟು ಅನೇಕ ಸಾವಿರ ವರ್ಷ ಬ್ರಹ್ಮದೇವರನ್ನು ಕುರಿತು ತಪಸ್ಸು ಮಾಡಿ ಬ್ರಹ್ಮರ್ಷಿತ್ವವನ್ನು ಸಂಪಾದನೆ ಮಾಡುವ ಕಠಿಣ ಮಾರ್ಗವನ್ನು ಏಕೆ ಆಶ್ರಯಿಸಿದರು?

ಕರ್ಮದಿಂದ ಜಾತಿವ್ಯವಹಾರ ಎಂಬುದಾಗಿ ಹೇಳುವವರ ಮಾತನ್ನು ಪೂರ್ತಿ ತೆಗೆದುಹಾಕಬಾರದು, ಶಾಸ್ತ್ರದಲ್ಲಿ ಕರ್ಮದಿಂದಲೂ, ಗುಣದಿಂದಲೂ, ಜಾತಿಯನ್ನು ಒಪ್ಪಿ ಉತ್ಪತ್ತಿಯಿಂದಲೂ ಜಾತಿಯು ಹೇಳಲ್ಪಟ್ಟಿದೆ. ಹೀಗಿರುವಲ್ಲಿ ಶಾಸ್ತ್ರಹೇಳುವ ಒಂದನ್ನು ಒಪ್ಪಿ ಮತ್ತೊಂದನ್ನು ಒಪ್ಪದಿರುವುದು ಯಾವ ನ್ಯಾಯವಾಗುತ್ತದೆ? ಜಾತಿಗೆ ಕಾರಣವಾದ ಉತ್ಪತ್ತಿ, ಕರ್ಮ, ಗುಣ ಇವುಗಳ ಮಧ್ಯದಲ್ಲಿ ಯಾವ ಯಾವುದಕ್ಕೆ ಎಷ್ಟು ಮರ್ಯಾದಾಸ್ಥಾನ ಇರುವುದೆಂಬುದನ್ನು ಶಾಸ್ತ್ರದೃಷ್ಟಿಯಿಂದಲೇ ತಿಳಿಯಬೇಕು. ಆ ವಿಷಯವನ್ನು ಮುಂದೆ ತಿಳಿಸುತ್ತೇವೆ. ಉತ್ಪತ್ತಿಯಿಂದ ಜಾತಿ ಇಲ್ಲವೆಂದು ಹೇಳುವುದು ಒಂದು ಮಹಾಸಾಹಸದ ಕೆಲಸವೇ ಸರಿ, ಪರಮಾತ್ಮನು ತನ್ನಿಂದ ಬ್ರಾಹ್ಮಣಾದಿ ನಾಲ್ಕು (4) ಜಾತಿಗಳು, ಅವರವರಿಗೆ ಉಚಿತವಾದ ಕರ್ಮಗಳು, ಗುಣಗಳು ನಿರ್ಮಿಸಲ್ಪಟ್ಟಿವೆ ಎಂದು ಹೇಳಿದ್ದಾನೆಯೇ ವಿನಹ ಕರ್ಮದಿಂದಲೇ ಜಾತಿ ಎಂದು ಹೇಳಿಲ್ಲ. ಕರ್ಮಮಾತ್ರದಿಂದಲೋ, ಗುಣಮಾತ್ರದಿಂದಲೋ ಜಾತಿ ಒಪ್ಪುವದು ಶ್ರೀಕೃಷ್ಣನಿಗೆ ಸಮ್ಮತವಾಗಿದ್ದರೆ, ಅರ್ಜುನರು ಬಂಧುವರ್ಗವೇ ಮೊದಲಾದವರನ್ನು ಕೊಲ್ಲುವುದಕ್ಕಿಂತ ಭಿಕ್ಷೆಬೇಡುವುದೇ ಲೇಸೆಂದು ಹೇಳಿದಾಗ ಅರ್ಜುನರನ್ನು ಕುರಿತು ಶ್ರೀಕೃಷ್ಣನು, ಶಾಂತಿ, ದಯೆ ಮೊದಲಾದ ಗುಣಗಳಿಂದ ಕೂಡಿದ ನೀನು ಬ್ರಾಹ್ಮಣನಾಗಿದ್ದೀ ಎನ್ನುವುದನ್ನು ಬಿಟ್ಟು ಪೂರ್ವದ ಮಹಾಪುಣ್ಯದಿಂದಲೇ ಕ್ಷತ್ರಿಯರಿಗೆ ಇಂತಹ ಮಹಾಯುದ್ಧ ಮಾಡುವ ಯೋಗ ದೊರಕುವುದು. ಮತ್ತು ಅದು ಮುಂದಿನ ಮಹಾ ಶ್ರೇಯಸ್ಸಿಗೆ ಕಾರಣವಾಗುವದು. ಆದ್ದರಿಂದ ಯುದ್ಧ ಮಾಡು ಎಂದು ಹೇಳಿದನೇಕೆ ?

ಇದರಿಂದ ಅರ್ಜುನರು ಉತ್ಪತ್ತಿಯಿಂದಲೇ ಕ್ಷತ್ರಿಯರೆಂದು ಒಪ್ಪಲೇಬೇಕಲ್ಲವೇ ? ಇದರಂತೆ ಇನ್ನೂ ಕೆಲವು ಉದಾಹರಣೆಗಳು.

1. ಧೃತರಾಷ್ಟ್ರ ಧರ್ಮದ ವಿಚಾರದಲ್ಲಿ ವಿದುರನನ್ನು ಪ್ರಶ್ನೆ ಮಾಡಿದಾಗ, ವಿದುರನು ನಾನು ಶೂದ್ರನಾದ್ದರಿಂದ ಬರಮಾಡಿ ಉಪದೇಶದ ಅಧಿಕಾರವಿಲ್ಲ ಎಂದು ಸನತ್ಸುಜಾತರನ್ನು ಬರಮಾಡಿ ಉಪದೇಶ ಮಾಡಿಸಿದರು. ಇದನ್ನು ಗಮನಿಸಿದಾಗ ಉತ್ಪತ್ತಿಯಿಂದಲೇ ಜಾತಿ ಉಂಟೆಂದು ತಿಳಿಯುತ್ತದೆ.

2. ಶ್ರೀವೇದವ್ಯಾಸದೇವರು ರೋಮಹರ್ಷಣರನ್ನು ಸುತಜಾತಿಯವನನ್ನಾಗಿಯೇ ಸೃಷ್ಟಿಮಾಡಿ, ಇತಿಹಾಸ ಪುರಾಣಗಳನ್ನು ಕಲಿಸಿ ಶೌನಕಾದಿ ಬ್ರಾಹ್ಮಣರಿಗೆ ಆ ಗ್ರಂಥ ಹೇಳುವುದಕ್ಕೆ ಅಧಿಕಾರ ಕೊಟ್ಟು ಕುಳುಹಿಸಿದಾಗ, ಆ ಸೂತರ ಮಕ್ಕಳು ಶೌನಕಾದಿಗಳಿಗೆ ಕಥಾ ಹೇಳುವ ಸಂದರ್ಭದಲ್ಲಿ ನಮಗೆ ದೌಷ್ಕುಲ್ಯದಿಂದ (ಬ್ರಾಹ್ಮಣಸ್ತ್ರೀ ಕ್ಷತ್ರಿಯ ಪುರುಷರಿಂದ ಉತ್ಪನ್ನವಾದ ಬ್ರಾಹ್ಮಣರಿಗಿಂತ ಕಮ್ಮಿಯಾದ ಸೂತ ಜಾತಿಯಿಂದ) ಸಂಭವಿಸುವ ದುಃಖವು ತಮ್ಮಂತಹ ಉತ್ತಮರಾದ ಬ್ರಾಹ್ಮಣರಿಗೆ ಪುರಾಣಾದಿಗಳನ್ನು ಹೇಳುವ ಯೋಗವನ್ನು ದೇವರು ಒದಗಿಸಿಕೊಟ್ಟಿದ್ದರಿಂದ ನಿವೃತ್ತಿಯಾಗುತ್ತಿದೆ ಎಂದು ಹೇಳಿದ್ದಾರೆ; ಅಂದ ಮೇಲೆ ಉತ್ಪತ್ತಿಯಿಂದಲೇ ಜಾತಿ ಬರುತ್ತದೆಂದು ತಿಳಿಯಬೇಕಾಗಿದೆ.

3. ಮಹಾಭಾರತದಲ್ಲಿ ಧರ್ಮವ್ಯಾಧನು ಬ್ರಾಹ್ಮಣನನ್ನು ಕುರಿತು, ''ನೀವು ಉತ್ತಮರಾದ ಬ್ರಾಹ್ಮಣರಾದ್ದರಿಂದ ನಿಮಗೆ ಉಪದೇಶ ಮಾಡುವ ಅಧಿಕಾರ ನಮಗಿಲ್ಲ, ತಿಳಿದ ಧರ್ಮವನ್ನು ಮಾತ್ರ ಹೇಳುತ್ತೇನೆ'' ಎಂದು ತಿಳಿಸುತ್ತಾನೆ. ಇದರಿಂದಲೂ ಉತ್ಪತ್ತಿಯಿಂದ ಜಾತಿ ಇದೆ ಎಂದು ತಿಳಿಯುತ್ತಿದೆ.

4. ಪರಶುರಾಮದೇವರು 21 ಸಾರಿ ಭೂಪ್ರದಕ್ಷಿಣೆಯನ್ನು ಮಾಡಿ ದುಷ್ಟ ಕ್ಷತ್ರಿಯರನ್ನು ಸಂಹಾರ ಮಾಡಿದ ನಂತರ ತಂದೆಗಳಾದ ಜಮದಗ್ನಿ ಪರಶುರಾಮನನ್ನು ಕುರಿತು ಬ್ರಾಹ್ಮಣರಾದ ನಮಗೆ ಈ ಸಂಹಾರ ಕಾರ್ಯವು ಯೋಗ್ಯವಾದದ್ದಲ್ಲ. ಆದ್ದರಿಂದ ಮುಂದೆ ಸಂಹಾರ ಮಾಡುವುದನ್ನು ನಿಲ್ಲಿಸಿಬಿಡು ಎಂದು ಹೇಳಿದ್ದಾರೆ. ಕಾರ್ಯದಿಂದಲೇ ಜಾತಿ ಹೇಳುವ ಹಾಗಿದ್ದರೆ ನೀನು ಕ್ಷತ್ರಿಯನಾಗಿದ್ದೀ ಎಂದು ಹೇಳಬೇಕಾಗಿತ್ತಲ್ಲವೆ?

5. ದ್ರೋಣಾಚಾರ್ಯರು ಧರ್ಮರಾಜನನ್ನು ಯುದ್ಧದಲ್ಲಿ ಸೋಲಿಸಿ ಅವರನ್ನು ಹಿಂಬಾಲಿಸಿದಾಗ ಯುಧಿಷ್ಠಿರನು ಕ್ಷತ್ರಿಯರಾದ ನಾವು ನಮ್ಮ ಧರ್ಮದಂತೆ ಯುದ್ಧ ಮಾಡುತ್ತಿರುವಾಗ 'ಬ್ರಾಹ್ಮಣರಾದ ನೀವು ಪರಧರ್ಮವನ್ನು (ಕ್ಷತ್ರಿಯ ಧರ್ಮವನ್ನು ) ಹಿಡಿದು ನಮ್ಮನ್ನು ಹಿಂಸಿಸುವುದು ಸರಿಯಲ್ಲಾ' ಎಂದು ಹೇಳಿದಾಗ ಅವರು ನಕು ಹಿಂದಿರಂಗಿದರೆಂದಿದೆ. ಮತ್ತು ದ್ರೋಣಾಚಾರ್ಯರು ತಮ್ಮ ಸೇನಾಧಿಪತ್ಯದ 5 ನೆಯ ದಿವಸ ಬಹಳವಾಗಿ ಪಾಂಡವರ ಸೈನ್ಯವನ್ನು ನಾಶ ಮಾಡುತ್ತಿರುವಾಗ, ಅಶ್ವತ್ಥಾಮಾಚಾರ್ಯರು ಹತರಾದರೆಮಬ ವಾರ್ತೆಯನ್ನು ಕೇಳಿ ಧನುಸ್ಸನ್ನು ಕೆಳಗಿಟ್ಟು, ಪ್ರಾಯೋಪವೇಶಕ್ಕೆ ಕುಳಿತಾಗ ದೇವತೆಗಳು ಅಂತರಿಕ್ಷದಲ್ಲಿ ಬಂದು, ಪರಧರ್ಮವನ್ನು ಎಷ್ಟು ದಿವಸ ಆಶ್ರಯಿಸುತ್ತೀರಿ, ಹಿಂದಿರುಗಿ ಬಂದುಬಿಡಿ ಎಂದು ಕರೆದಿದ್ದಾರೆ.

6.ಕರ್ಣನು ಸೂರ್ಯನಿಂದ ಕುಂತೀದೇವಿಯಲ್ಲಿ ಉತ್ಪನ್ನನಾದ ಕ್ಷತ್ರಿಯನಾಗಿದ್ದರೂ ಕ್ಷತ್ರಿಯನಾಗಿದ್ದರೂ ಸೂತಜಾತಿಯವನಾದ ಅಧಿರಥ ಮತ್ತು ರಾಧಾ ಇವರಿಂದ ರಕ್ಷಿತನಾಗಿ, ಸೂತಜಾತಿಯ ಸಂಸ್ಕಾರ ಪಡೆದು ಸೂತನೆಂದೆನಿಸಿರುವಾಗ ಕರ್ಣನು ಕುಂತೀದೇವಿಯನ್ನು ಕುರಿತು, 'ನೀನು ನನ್ನ

ಉತ್ಪತ್ತಿವಿಷಯದಲ್ಲಿ ಗುಟ್ಟು ಮಾಡಿದ್ದರಿಂದ, ನಾನು ಕಮ್ಮಿ ಜಾತಿಯವನಾಗಬೇಕಾಯಿತು' ಎಂದು ಆಕ್ಷೇಪಿಸಿದ್ದಾನೆ.

7. ಭೀಮನೆಂಬ ಕುಂಬಾರನು ದೇವರಿಗೆ ತುಳಸಿ ಅತ್ಯಂತ ಪ್ರೀತಿಕರವಾದುದೆಂದು ತಿಳಿದಿದ್ದರೂ, ತಾನು ಶೂದ್ರಪ್ರಭೇದವಾದ ಕುಂಬಾರನಾದ್ದರಿಂದ ತುಳಸಿ ಮುಟ್ಟಬಾರದೆಂದು ತಿಳಿದು, ತನ್ನ ಜಾತಿಮರ್ಯಾದೆಯನ್ನು ಮೀರದೆ ಮಣ್ಣಿನಿಂದ ತುಳಸಿದಳಗಳನ್ನು ಮಾಡಿ ತನ್ನ ಮನೆಯ ಮಾಡ (ಗೂಡ) ದಲ್ಲಿ ಇರುವ ಮರದ ವೇಂಕಟರಮಣನ ಪ್ರತಿಮೆಯ ಪಾದಗಳಲ್ಲಿ ನಿತ್ಯವೂ ಸಮರ್ಪಿಸುತ್ತಿರುವಾಗ ತಿರುಪತಿಯಲ್ಲಿರುವ ಶ್ರೀನಿವಾಸನು, ಆ ತುಳಸಿದಳಗಳನ್ನು ತನ್ನ ಸಾಕ್ಷಾತ್ ಪಾದದಲ್ಲಿರುವಂತೆ ಮಾಡಿಕೊಂಡು ತನ್ನ ಚಿಕ್ಕಮಾವನಾದ ತೊಂಡಮಾನಚಕ್ರವರ್ತಿಗೆ ದರ್ಶನಕೊಟ್ಟ ಕಥೆ ಇದೆ. ಈ ಕಥೆಯಿಂದ ಅವರು ತಮ್ಮ ಜಾತಿಧರ್ಮದಂತೆ ಸೇವೆ ಮಾಡಿದಾಗ ದೇವರು ಆ ಸೇವೆಯನ್ನು ಸ್ವೀಕರಿಸುವನೆಂದು ಹಾಗೆಯೇ ಭೀಮನೆಂಬುವನು ಉತ್ಪತ್ತಿಯಿಂದಲೇ ಕುಂಬಾರನು ಎಂದು ತಿಳಿಯುತ್ತದೆ.

8. ಶ್ರೀಕೃಷ್ಣನು ಗೋಕುಲದಲ್ಲಿ ಬಾಲ್ಯಲೀಲೆಗಳನ್ನು ತೋರಿಸುತ್ತಿರುವಾಗ ಒಂದು ದಿನ ಗಾಲವಋಷಿಗಳು ನಂದಗೋಪನ ಮನೆಗೆ ಹೋದರು. ಯಶೋದಾದೇವಿಯರು ಅವರನ್ನು ಕುರಿತು, 'ನಾವು ವೈಶ್ಯರು. ಬ್ರಾಹ್ಮಣರಾದ ನೀವು ನಮ್ಮಲ್ಲಿ ಊಟ ಮಾಡುವಂತಿಲ್ಲ. ಆದ್ದರಿಂದ ನಾವು ಒದಗಿಸಿಕೊಟ್ಟ ಸಾಮಗ್ರಿಗಳಿಂದ ಅಡಿಗೆ ಮಾಡಿಕೊಳ್ಳಿ' ಎಂದು ಹೇಳಿದ ಕಥೆಯೂ ಕಂಡುಬಂದಿದೆ.

9.ವಸುದೇವನು ಆಪತ್ಕಾಲದಲ್ಲಿ ತನ್ನ ಮಕ್ಕಳಾದ ರಾಮ,ಕೃಷ್ಣರನ್ನು ಗೋಕಲದಲ್ಲಿ ಬಿಟ್ಟಿರುವಾಗ ತಮ್ಮ ಕುಲಪುರೋಹಿತರಾದ ಗರ್ಗಾಚಾರ್ಯರನ್ನು ಕುರಿತು ನಂದಗೋಪನು ರಾಮಕೃಷ್ಣರಿಗೆ ತನ್ನ ಜಾತಿಯಾದ ವೈಶ್ಯಸಂಸ್ಕಾರವನ್ನು ಮಾಡಿಸಬಾರದು; ಆದ್ದರಿಂದ ನೀವೇ ನಂದಗೋಕಲಕ್ಕೆ ಹೋಗಿ (ಕ್ಷತ್ರಿಯರಾದ ನಮ್ಮ ಧರ್ಮ ಉಳಿಸಿಕೊಳ್ಳುವುದಕ್ಕೋಸ್ಕರ) ಆ ಹುಡುಗರಿಗೆ ಕ್ಷತ್ರಿಯಯೋಗ್ಯವಾದ ಸಂಸ್ಕಾರ ಮಾಡಿ ಬನ್ನಿ'' ಎಂದು ಹೇಳಿದ್ದಾರೆ.

10. ವೈಶಾಖಮಾಸ ಮಹಾತ್ಮ್ಯೆಯಲ್ಲಿ ಒಬ್ಬ ಬೇಡನು ಒಬ್ಬ ಬ್ರಾಹ್ಮಣನನ್ನು ಕುರಿತು, ನೀವು ಬ್ರಾಹ್ಮಣರಾದ್ದರಿಂದ ನಮ್ಮ ಬಿಸಿ ಪದಾರ್ಥವನ್ನು ಮುಟ್ಟುವಂತಿಲ್ಲಾ. ಆದ್ದರಿಂದ ಹಸಿಪದಾರ್ಥವನ್ನು ಕೊಟುತ್ತೇನೆ. ಅಡಿಗೆ ಮಾಡಿಕೊಳ್ಳಿ ಎಂದು ಹೇಳಿದ್ದಾನೆ.

11.ಒಬ್ಬ ಬ್ರಾಹ್ಮಣಕುಮಾರನು ಒಬ್ಬ ಕ್ಷತ್ರಿಯನ ಸಮೀಪಕ್ಕೆ ಹೋದಾಗ ಆ ಕ್ಷತ್ರಿಯನು ಈ ಹುಡುಗನನ್ನು ಪ್ರಶ್ನಿಸಿದನು. ಆ ಹುಡುಗನು ತನಗೆ ಉತ್ತರ ತೋರದೆ ನೀನೇ ಅದನ್ನು ಹೇಳು ಎಂಬುದಾಗಿ ಕೇಳುವನು. ಆನಂತರ ಆ ರಾಜನು ನೀನು ನನಗಿಂತ ಉತ್ತಮ ನಾದ ಬ್ರಾಹ್ಮಣನಾದುದರಿಂದ ನಿನಗೆ ಉಪದೇಶ ಮಾಡುವ ಅಧಿಕಾರನನಗಿಲ್ಲ. ನಿನ್ನ ಪ್ರಶ್ನೆಯ ಉತ್ತರವನ್ನು ಮಾತ್ರ ತಿಳಿಸುತ್ತೇನೆ. ಅದು ಉಪದೇಶರೂಪವಾದದ್ದಲ್ಲ. ಎಂಬ ಭಾವವನ್ನು ಕೊಟ್ಟಿದ್ದಾನೆ .ಈ ಕಥೆಯು ಉಪನಿಷತ್‌ನಲ್ಲಿದೆ.

ಹೀಗೆ ಉತ್ಪತ್ತಿಯಿಂದಲೇ ಜಾತಿ ಉಂಟೆಂಬುದಕ್ಕೆ ಸಾವಿರಾರು ದೃಷ್ಟಾಂತಗಳನ್ನು ಕೊಡಬಹುದು. ಗ್ರಂಥ ದೊಡ್ಡದಾಗುವುದೆಂಬ ಕಾರಣದಿಂದ ಇಷ್ಟಕ್ಕೆ ನಿಲ್ಲಿಸಬೇಕಾಗಿದೆ. ಈ ಮೇಲ್ಕಂಡ ದೃಷ್ಟಾಂತಗಳನ್ನು ಗಮನಿಸಿದಾಗ ಆ

ಹುಟ್ಟಿನಿಂದ ಬಂದ ಜಾತಿಯನ್ನು ಉಚಿತವಾದ ಸಂಸ್ಕಾರದಿಂದ ಉಳಿಸಿಕೊಳ್ಳಬೇಕೆಂದು ಗೊತ್ತಾಗುತ್ತದೆ. ಹಾಗೆ ಸಂಸ್ಕಾರ ನಡೆಯದೇ ಇರುವ ಕಾಲದಲ್ಲಿ ಆ ಜಾತಿ ನಷ್ಟವಾಗುವ ಸಂದರ್ಭವೂ ಉಂಟು. ಹೇಗೆಂದರೆ ಬೀಜಗಳ ಅಂಕುರೋತ್ಪಾದನಶಕ್ತಿಗೆ ತಕ್ಕಷ್ಟು ನೀರು, ಮಣ್ಣು ಇಲ್ಲದೇ ಇರುವ ಸಂರ್ಭದಲ್ಲಿ ನಶಿಸಿ ಹೋಗುವುದಷ್ಟೇ! ಅದೇ ರೀತಿಯಲ್ಲಿ ಉಚಿತ ಸಂಸ್ಕಾರ ನಡೆಯದೇ ಇರುವ ಕಾಲದಲ್ಲಿ ಜಾತಿ ನಷ್ಟವಾಗುವ ಸಂದರ್ಭವೂ ಉಂಟು. ಪ್ರಾಯಃ ಎಲ್ಲಾ ವಿಷಯದಲ್ಲೂ ಕಳೆದುಕೊಳ್ಳುವುದು ಸುಲಭ, ಸಂಪಾದನೆ ಮಾಡುವುದು ಕಷ್ಟ ಆದ್ದರಿಂದ ಜಾತಿಭ್ರಷ್ಟತೆಯನ್ನು ಸುಲಭವಾಗಿ ಹೊಂದಬಹುದು. ಉತ್ತಮ ಜಾತಿಯನ್ನು ಸಂಪಾದಿಸುವುದು ಸುಲಭಸಾಧ್ಯವಲ್ಲ.

ಕಮ್ಮಿ ಜಾತಿಯವರಿಗೆ ಹೆಚ್ಚಿಗೆ ಜ್ಞಾನ ಹೇಗೆ ಬರುತ್ತದೆ ಎಂಬ ಸಂಶಯ ಬೇಡ. ಯಾವುದೋ ಒಂದು ಪುಣ್ಯವಿಶೇಷದಿಂದ ಅಣ್ಣನಾಗಿ ತಮ್ಮನಿಂದ ನಮಸ್ಕಾರ ಮಾಡಿಸಿಕೊಳ್ಳುತ್ತಿದ್ದರೂ ಮತ್ತೆ ಯಾವುದೋ ಪುಣ್ಯದಿಂದ ತಮ್ಮನು ಅಣ್ಣನಿಗಿಂದ ಧನುಳ್ಳವನೂ, ಬಲವುಳ್ಳವನೂ, ಆರೋಗ್ಯ ಉಳ್ಳವನೂ, ವಿದ್ಯಾವಂತನೂ ಆಗಬಹುದು. ಅದರಂತೆಯೇ ಹಿಂದಿನ ಕಾಲದವರು ನಡೆದುಕೊಂಡು ಬಂದಿದ್ದಾರೆ. ಈಗ ಕಲಿಯುಗಪ್ರಭಾವದಿಂದ ಸಜ್ಜನರ ಬುದ್ಧಿಯು ದುಷ್ಟರ ಸಹವಾಸದಿಂದ ನಷ್ಟಪ್ರಾಯವಾಗಿ ಮಾತ್ಸರ್ಯಗ್ರಸ್ತವಾಗಿ ಮರ್ಯಾದಾಸ್ಥಾನಗಳನ್ನು ಅಳಿಸುವ ಸಂದರ್ಭ ಒದಗಿಬಂದು ಒಂದು ತರಹ ಕ್ರಾಂತಿಯೂ ಅಶಾಂತಿಯೂ ಉಂಟಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ ವಿವೇಕಿಗಳು ಯಾರ ಮರ್ಯಾದೆಯನ್ನೂ ಕೆಡಿಸದೇ ಎಚ್ಚರಿಕೆಯಿಂದ ನಡೆಯುವುದೇ ಬುದ್ಧಿವಂತರ ಲಕ್ಷಣವಾಗುತ್ತದೆ.

ದೊಡ್ಡ ಅಧಿಕಾರಿಗಳಾಗಿರತಕ್ಕವರು ಯಾವೊದೋ ಒಂದು ಪುಣ್ಯದಿಮದ ಆ ಉತ್ತಮಸ್ಥಾನ ಹೊಂದಿದ್ದರೂ ಪಾಪಮೂಲವಾದ ಅನೇಕ ದೋಷಗಳಿಂದ

ಕೂಡಿರುವುದಕ್ಕೂ ಅವಕಾಶವುಂಟು. ಹಾಗೆಯೇ ಯಾವುದೋ ಒಂದು ಪುಣ್ಯದಿಂದ ಉತ್ತಮಜಾತಿಯ ಬ್ರಾಹ್ಮಣನಾಗಿ ಹುಟ್ಟಿದ್ದರೂ ಹಿಂದಿನ ಜನ್ಮದ ಪಾಪಮೂಲವಾಗಿಯೂ, ಸಹವಾಸದೋಷದಿಂದಲೂ ಬಹುದೋಷದಿಂದ ಕೂಡಿರಬಹುದು. ಇದರಂತೆ ಯಾವುದೋ ಪಾಪದಿಂದ ಅಂತ್ಯಜನಾಗಿ ಹುಟ್ಟಿದ್ದರೂ ಅವನ ಪೂರ್ವದ ಯವುದೋ ಒಂದು ಪುಣ್ಯದಿಂದ ಉತ್ತಮಗುಣಗಳಿಂದ ಕೂಡಿರುವನು ಆಗಿರಬಹುದು. ಇಂತಹ ವಿಷಯಗಳನ್ನು ಶಾಸ್ತ್ರಗಳಿಂದ ತಿಳಿದವರು ತಮಗೆ ಬಂದಿರುವ ಜಾತಿಯೇ ಮೊದಲಾದ ಉತ್ತಮಸ್ಥಿತಿನಿಮಿತ್ತವಾಗಿ ಅಹಂಕಾರ ಪಡುವುದಿಲ್ಲ, ಜಾತಿಯನ್ನು ತಿರಸ್ಕಾರ ಮಾಡುವುದೂ ಇಲ್ಲ, ತಮಗೆ ಬಂದಿರುವ ತಾತ್ಕಾಲಿಕವಾದ ಜಾತಿಯು ಅಶಾಶ್ವತವಾದದ್ದೆಂದು ತಿಳಿದು, ದೇವರು ಯಾವ ಯಾವ ಜಾತಿಗೆ ಯಾವ ಯಾವ ಕೆಲಸಗಳನ್ನು ಆಜ್ಞಾ ಮಾಡಿರುತ್ತಾನೋ ಅದನ್ನೇ ಮಾಡುತ್ತಾ, ದೇವರ ಸೇವೆಯೆಂದು ಸಮರ್ಪಣೆ ಮಾಡುತ್ತಾ ದೇವರ ಅನುಗ್ರಹಸಂಪಾದನೆಯಲ್ಲಿ ಮಾತ್ರ ದೃಷ್ಟಿಕೊಟ್ಟಿರುತ್ತಾರೆಯೇ ವಿನಹ ಈ ಕೆಲಸವೇ ಮಾಡಬೇಕು; ಈ ಕೆಲಸ ಮಾಡಬಾರದು ಎಂಬ ಹಠ(ಆಗ್ರಹ) ಆ ಭಕ್ತರಿಗೆ ಇರುವುದಿಲ್ಲ.

ಶಾಸ್ತ್ರದಲ್ಲಿ ಜಾತಿಗೆ ಉಚ್ಚನೀಚಭಾವವು ಹೇಳಲ್ಪಟ್ಟಿರುವುದರಿಂದ ಅದು ಸುಖಕ್ಕೆ ಕಾರಣವೆಂದೇ ತಿಳಿಯಬೇಕು. ನಾವು ಈ ಲೋಕದಲ್ಲಿ ಸುಖಜೀವನಕ್ಕಾಗಿ ಸರಕಾರದ ನೌಕರರಲ್ಲೂ ತರತಮಭಾವವನ್ನು ಅಂಗೀಕರಿಸಲೇಬೇಕಾಗಿದೆ. ಆ ತರತಮಭಾವವು ಇರಬಾರದೆಂದು ಹೇಳುತ್ತಾ ತಾವು ಮಾತ್ರ ತಮ್ಮ ಸರಕಾರದಲ್ಲೂ ತರತಮಭಾವ ಇಟ್ಟುಕೊಂಡೇ ಕಾರ್ಯನಿರ್ವಾಹ ಮಾಡುವವರು ಮಹಾಮೋಸಗಾರರೇ ಎಂದು ತಿಳಿಯ ಬೇಡವೇ ? ಆದ್ದರಿಂದ ಲೋಕದಲ್ಲಿ ಹೇಗೆ ತರತಮಭಾವ ಒಪ್ಪಬೇಕೋ, ಅದರಂತೆಯೇ ವೇದಾಂತಸಾಮ್ರಾಜ್ಯದ (ದೇವರನ್ನು ಹೊಂದುವ)

ಮಾರ್ಗದಲ್ಲೂತ್ತರತಮಭಾವವನ್ನು ಒಪ್ಪಲೇಬೇಕು. ನಾವು ಹಿಂದೆ ಹೇಳಿದಂತೆ ನೌಕರರ ಸ್ಥಾನ, ಮಾನ ವೇತನಗಳು ಭಿನ್ನಭಿನ್ನವಾಗಿರುವಂತೆ ಈ ವೇದಾಂತ ಸಾಮ್ರಾಜ್ಯದಲ್ಲೂ ಸ್ಥಾನದಂತಿರುವ ಭಿನ್ನ ಭಿನ್ನ (positions) ಜಾತಿಗಳನ್ನು ಒಪ್ಪಿ ಅವರುಗಳ ಕಾರ್ಯ, ಮರ್ಯಾದೆ, ವೇತನದಲ್ಲೂ, ಅಧಿಕಾರ ಶಕ್ತಿಯಲ್ಲೂ (power)ತಾರತಮ್ಯ ಒಪ್ಪಲೇಬೇಕು. ನಾವು ಮಾಡುವ ಧರ್ಮಕಾರ್ಯಗಳಿಗೆ ಎಲ್ಲಾ ದೊಡ್ಡವರ ಆಶೀರ್ವಾದ, ಶಿಫಾರಸ್ಸು (influence)ಬೇಕೇ ಬೇಕಾದುದರಿಂದ, ಆಸ್ತಿಕರು ತಮಗಿಂತ ಉತ್ತಮ ಜಾತಿಗೆ ತಮ್ಮ ಮನಃಪೂರ್ವಕವಾದ (from the heart of heart) ಮರ್ಯಾದೆಯನ್ನು ಸಲ್ಲಿಸಲೇಬೇಕು.

ನೀಚಸ್ಥಾನ (ಜಾತಿ) ದಲ್ಲಿರುವವರಿಗೆ ಉತ್ತಮಸ್ಥಾನವನ್ನು ಸಂಪಾದನೆ ಮಾಡುವ ಒಂದು ಅವಕಾಶ ಹೇಗೆ ಇದೆಯೋ, ಹಾಗೆಯೇ ಉತ್ತಮ ಸ್ಥಾನ (ಜಾತಿ)ವನ್ನು ಹೊಂದಿರುವವರು ತಮ್ಮ ಕರ್ತವ್ಯದಿಂದ ಭ್ರಷ್ಟರಾದರೂ, ಅಹಂಕಾರದಿಂದ ತಮ್ಮ ಕೆಳಗಿನ ನೌಕರರನ್ನು ಹಿಂಸಿಸುವ ದುರ್ಬುದ್ಧಿ ಮೊದಲಾದವುಗಳಿಂದ ಕೂಡಿರುವಾಗಲೂ, ಅವರು ನೀಚ ಸ್ಥಾನಕ್ಕೆ (ಜಾತಿಗೆ) ಇಳಿಯುವ (degrade ಆಗುವ) ಸಂದರ್ಭವೂ ಉಂಟು. ಆದರೆ ಅದೇ ಜಾತಿಭೇದವಿಲ್ಲವೆಂದು ಹೇಳುತ್ತಾ, ಜಾತಿಪ್ರೇಮವನ್ನೇ, ಪ್ರಧಾನವಾಗಿಟ್ಟುಕೊಂಡು, ನೀಚಜಾತಿಯವರು ತಪ್ಪುಮಾಡಿದರೂ ಅವರಿಗೇ ಪ್ರೋತ್ಸಾಹ ಕೊಡುತ್ತಾ ಮೋಸ ಮಾಡುತ್ತಿರುವ ಹುಚ್ಚು ಸರಕಾರದಂತೆ ದೇವರ ಸರ್ಕಾರವಲ್ಲವೆಂದು ತಿಳಿಯಬೇಕು.

ದೇವರು ಎಂತಹ ದೊಡ್ಡ ಋಷಿಗಳಾದರೂ, ದೇವತೆಗಳಾದರೂ ಅವರು ತಪ್ಪು ಮಾಡಿದರೆ ಅವರಿಗೂ ಶಿಕ್ಷಾ ಕೊಡದೇ ಇರುವವನಲ್ಲ, ಇಂತಹ ಬಹು ಕಠಿಣಗುಣದವನಾಗಿದ್ದರೂ ತಾವು ತಮ್ಮನ್ನು ತಿದ್ದಿಕೊಂಡು ಶರಣಾಗರತಾದರೆ,

ಕರುಣಾಸಮುದ್ರನಾದ್ದರಿಂದ ರಕ್ಷಣೆ ಮಾಡದೇ ಬಿಡಲಾರನು. ಇಂತಹ ಯೋಗವನ್ನು ಕಳೆದುಕೊಳ್ಳುವವರು ನಿರ್ಭಾಗ್ಯರೇ ಸರಿ.

ಲೋಕದಲ್ಲಿ ವಯಸ್ಸು, ಬಲ, ವಿದ್ಯಾ, ಧನ, ಸ್ಥಾನ ಇವುಗಳು ಒಂದೊಂದು ಅಹಂಕಾರಕ್ಕೆ ಕಾರಣಗಳಾದವುಗಳು. ಹೀಗಿರುವಲ್ಲಿ ಮೇಲ್ಕಂಡ ಗುಣಗಳಿಂದ ರಹಿತರಾದ ಬ್ರಾಹ್ಮಣರಿಗೆ ಆ ಗುಣಗಳಿಂದ ಕೂಡಿಕೊಂಡಿರುವ ಮನ್ವಾದಿಗಳು ಬ್ರಾಹ್ಮಣರಿಗೆ ಮರ್ಯಾದೆ ಮಾಡುತ್ತಾ ಏಕಿದ್ದರು ? ಮನುಷ್ಯರಿಗಿಂತ (ಬ್ರಾಹ್ಮಣರಿಗಿಂತ) ಉತ್ತಮರಾದ ದೇವತಾ ಋಷಿಗಳು ಭೂಮಿಯಲ್ಲಿ ಹುಟ್ಟಿದಾಗ ಬ್ರಾಹ್ಮಣರಿಗೆ ಏಕೆ ಮರ್ಯಾದೆ ಮಾಡುತ್ತಿದ್ದರು ? ಇದನ್ನು ಯೋಚಿಸುವುದಾದರೆ, ನಾವು ಗೋವು, ಅಶ್ವತ್ಥವೃಕ್ಷ, ಪ್ರತಿಮೆಗಳು, ಸಾಲಿಗ್ರಾಮದ ಕಲ್ಲು, ಇವುಗಳಿಗೆ ಮೇಲ್ಕಂಡ ಗುಣಗಳು ಕಂಡುಬರದೇ ಇದ್ದಾಗ್ಯೂ ನಮಸ್ಕಾರ ಮಾಡುತ್ತೇವಷ್ಟೇ ? ಇವುಗಳನ್ನು ಗಮನಿಸಿದಾಗ ದೇವರು ಆ ವಸ್ತುಗಳಲ್ಲಿ ಇಟ್ಟಿರುವ ತನ್ನ ಒಂದು ಕಳಾಕ್ಕೆ ಮರ್ಯಾದೆ ಮಾಡುತ್ತಿದ್ದೇವೆಂದು ಭಾವಿಸಿಸಬೇಕಾಗಿದೆ. ಅಲ್ಲದೆ ತಮಗಿಂತ ಕಮ್ಮಿಯಾದ ವಸ್ತುಗಳಿಗೆ ನಮಸ್ಕಾರಾದಿಮರ್ಯಾದೆ ಮಾಡುವಷ್ಟು ಜ್ಞಾನಹೀನರೆಂದು ಯಾರನ್ನೂ ತಿಳಿಯಬಾರದು. ಜೀವರಿಗೆ ಮೇಲ್ಪಂಕ್ತಿಯಂತೆ ನಡೆಯುವುದಕ್ಕೋಸ್ಕರ ದೇವರು ತಾನೂ ಬ್ರಾಹ್ಮಣರಿಗೆ ಮರ್ಯಾದೆ ಮಾಡುತ್ತಾನೆ. ಹೀಗಿರುವಲ್ಲಿ ಆ ಬ್ರಾಹ್ಮಣರ ಮರ್ಯಾದೆಗೆ ಕುಂದು ತರುವ ಯಾರಿಗೆ ತಾನೇ ಶಿಕ್ಷಿಸದೇ ಬಿಡುತ್ತಾನೆ. ಆದ್ದರಿಂದ ದೇವರ ಅನುಗ್ರಹವನ್ನು ಬಯಸುವವರೆಲ್ಲರೂ ಬ್ರಾಹ್ಮಣಜಾತಿಗೆ ಸೂಕ್ತ ಗೌರವ ಕೊಡಲೇಬೇಕು.

ಬ್ರಾಹ್ಮಣರು ಕೆಟ್ಟಗುಣ ಉಳ್ಳವರಾಗಿರುವಾಗಲೂ ಅವರಿಗೆ ಗೌರವ ಕೊಡಬೇಕೇ ಎಂಬ ಪ್ರಶ್ನೆಗೆ (ಉತ್ತರವಾಗಿ ಈ ) ಲೋಕವ್ಯವಹಾರದಲ್ಲಿ ಸರ್ಕಾರದ ಮೇಲ್ದರ್ಜೆಯ ಅಧಿಕಾರಿಗಳು ಕೆಟ್ಟಗುಣಗಳಿಂದ ಕೂಡಿರುವಾಗ ಕೆಳದರ್ಜೆಯ

ಅಧಿಕಾರಿಗಳು ಅಂಥವರಿಗೆ ಗೌರವ ಸೂಚಿಸಬೇಕೇ ? ಎಂದು ಕೇಳಿದರೆ ಏನು ಉತ್ತರವೋ ಅದೇ ಉತ್ತರವನ್ನು ತಿಳಿಯಬೇಕು. ದೋಷನಿಮಿತ್ತವಾದ ಮಾನಸಿಕ ಪ್ರೇಮ ಇಲ್ಲದಿದ್ದರೂ ಸ್ಥಾನಮರ್ಯಾದೆಯನ್ನು ಕೆಡಿಸದೇ ನಮಸ್ಕಾರಾದಿರೂಪಮರ್ಯಾದೆ ಮಾಡಬೇಕು.

ಹೀಗಿದ್ದರೂ ಆ ಬ್ರಾಹ್ಮಣರು ಜಾತಿಯನ್ನೇ ನಾಶ ಮಾಡುವ ಸುರಾಪಾನಾದಿಗಳಂತಹ ಪುನಃ ಬ್ರಾಹ್ಮಣತ್ವಸಂಪಾದನೆಗೆ ಯೋಗ್ಯವಲ್ಲದ ದೋಷಗಳಿಂದ ಕೂಡಿರುವಾಗ dismiss ಆದ ಅಧಿಕಾರಿಗೆ ಹೇಗೆ ಸ್ಥಾನ ಮಾನದ ಮರ್ಯಾದೆ ಕೊಡಬೇಕಿಲ್ಲವೋ ಹಾಗೆ ಅವನಿಗೆ ಮರ್ಯಾದೆ ಮಾಡುವ ಅವಶ್ಯಕತೆ ಇರುವುದಿಲ್ಲ. ಪುನಃ ಬ್ರಾಹ್ಮಣತ್ವಸಂಪಾದನೆ ಮಾಡಬಹುದಾದ ಅಲ್ಪದೋಷ (ಪಾಪ)ಗಳು ಕಂಡುಬಂದಾಗ ಅವನನ್ನು ರಜಾದಿನದಲ್ಲಿರುವ ಅಧಿಕಾರಿಯಂತೆ ಕಾಣಬೇಕು. ಮನುಗಳು ಸಂಧ್ಯಾವಂದನಾದಿಗಳಿಂದ ಭ್ರಷ್ಟನಾದ ಬ್ರಾಹ್ಮಣನಿಗೆ ಶೂದ್ರನ ಕೆಲಸ ಕೊಡು ಎಂದು ಆಜ್ಞಾ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಪುನಃ ಉಪನಯನಕ್ಕೆ ಅವಕಾಶ ಉಂಟು. ಬ್ರಾಹ್ಮಣನು ತನ್ನ ಜೀವನಕ್ಕೋಸ್ಕರ ಕ್ಷಾತ್ರ ಅಥವಾ ವೈಶ್ಯವೃತ್ತಿಯನ್ನು ಹಿಡಿದಿರುವಾಗ ಆ ವ್ಯಕ್ತಿಯು ಅವನಲ್ಲಿ ಇರುವವರಿಗೂ ಧನಾದಿಗಳು ಮತ್ತು ಬ್ರಾಹ್ಮಣತ್ವ ಉಳಿಸಿಕೊಂಡಿರುವ ಬ್ರಾಹ್ಮಣರ ಸಹಪಂಕ್ತಿಯ ಅಧಿಕಾರವಿಲ್ಲ ಹಾಗೂ ವೈದ್ಯವೃತ್ತಿಯನ್ನು ಅನುಸರಿಸುತ್ತಿರುವವರಿಗೂ ಸಹಪಂಕ್ತಿಯ ಅಧಿಕಾರವಿಲ್ಲ. ನೀಚಜಾತಿಯವರು ಉತ್ತಮಗುಣಗಳಿಂದ ಕೂಡಿದ್ದರೆ ಅವರಿಗೆ ಮರ್ಯಾದೆ ಇಲ್ಲವೇ ?

ಒಂದೇ ಕುಟುಂಬದಲ್ಲಿದ್ದರೂ ವಯಸ್ಸಿನಲ್ಲಿ ಕಮ್ಮಿ ಇರುವವರಿಗೆ ಅವರ ಗುಣಕ್ಕೆ ತಕ್ಕಂತೆ ಮಾನಸಿಕವಾದ ಪ್ರೇಮವಿದ್ದರೂ ನಮಸ್ಕಾರಾರ್ಹತೆ ಹೇಗೆ ಇಲ್ಲವೋ; ವಯಸ್ಸಿನಲ್ಲಿ ಅಧಿಕವಿದ್ದರೂ, ಜ್ಞಾನಿಗಳಾಗಿದ್ದರೂ , ಅಂತಹವರಿಗೆ ಸೂತಕ

ವೃದ್ಧ್ಯಾದಿಗಳು ಬಂದಿರುವಾಗಲೂ ಸ್ಪರ್ಶ ಸಹಪಂಕ್ತಿ ಹೇಗೆ ಇಲ್ಲವೋ ; ಶ್ವೇತ(ಕುಷ್ಟ) ರೋಗ ಬಂದಿರುವವರಿಗೆ ಆಜನ್ಮಪೂರ್ತಿ (ಆ ರೋಗ ನಿವೃತ್ತಿಯಾಗುವವರೆಗೂ ) ಸ್ಪರ್ಶಯೋಗ್ಯತೆ ಹೇಗೆ ಇಲ್ಲವೋ; ಸಾಂಕ್ರಾಮಿಕರೋಗ ಇರುವವರಲ್ಲಿ ಎಷ್ಟೇ ಪ್ರೀತಿ ಇದ್ದರೂ ಸಮೀಪವರ್ತನೆಗಳು ಹೇಗೆ ಇಲ್ಲವೋ ಹಾಗೆಯೇ ಗುಣಭರಿತರಾದ ನೀಚಜಾತಿಯವರಲ್ಲೂ ವರ್ತಿಸಬೇಕು, ಆ ನೀಚಜಾತಿಯವರು ಯಾವಾಗಲೂ ನೀಚಜಾತಿಯವರಾಗಿಯೇ ಹುಟ್ಟುವತೇ ? ಅಂದರೆ ಕೆಳದರ್ಜೆಯಲ್ಲಿರುವವರು (subordinates) ಯಾವಾಗಲೂ ಅದೇ ಸ್ಥಾನದಲ್ಲಿ ಇರಬೇಕೇ ? ಅಂದರೆ, ಅವರು ಉತ್ತಮಾಧಿಕಾರಕ್ಕೆ ತಕ್ಕಷ್ಟು ಅರ್ಹತೆ (ವಿದ್ಯಾ) ಸಂಪಾದನೆ ಮಾಡಿದ ಮೇಲೆ ಉತ್ತಮಾಧಿಕಾರವನ್ನು ಹೇಗೆ ಹೊಂದಬಹುದೋ ಹಾಗೆಯೇ ನೀಚಜಾತಿಯವರು ಪುಣ್ಯವಿಶೇಷದಿಂದ ಜನ್ಮಾಂತರದಲ್ಲಿ ಉತ್ತಮಜಾತಿಗಳನ್ನು ಹೋಂದಬಹುದು, ಇಷ್ಟಾದರೂ ಜಾತಿ ಶಾಶ್ವತವಾದ ಒಂದು ಗುಣವಲ್ಲ, ಮುಂದಿನ ಜನ್ಮದಲ್ಲಿ ನೀಚಜಾತಿಯವರು ಮುಂದೆ ಉತ್ತಮ ಜಾತಿಯನ್ನು ಹೊಂದುವವರಾಗಿ ಮರ್ಯಾದೆ ಹೊಂದಬಹುದಾಗಿದ್ದರೂ ಈಗಲೇ (ನೀಚಜಾತಿಯಲ್ಲಿ ಇರುವಾಗಲೇ ) ಉತ್ತಮರಿಂದ ಮರ್ಯಾದೆ ತಮಗೆ ಇಲ್ಲವೆಂಬ ಒಂದು ದುಃಖ ಅವರಿಗೆ ಬರುವುದಿಲ್ಲವೇ ? ಅಂತಹ ದುಃಖಕ್ಕೂ ನಾವು ಮತ್ತೊಬ್ಬರಿಗೆ ಅವಕಾಶ ಕೊಡಬಾರದು. ಅಂದರೆ ವಯಸ್ಸಿನಲ್ಲಿ ಕಡಿಮೆ ಇರುವ ತಮ್ಮಂದಿರೇ ಮೊದಲಾದವರು, ದ್ರವ್ಯಹೀನರು, ಬಲಹೀನರು, ಬುದ್ಧಿಹೀನರು, ಈ ಗುಣಗಳಲ್ಲಿ ಉತ್ತಮರಿಂದ ಆ ಜನ್ಮದಲ್ಲೇ ಮರ್ಯಾದೆ ಬಯಸುವುದು ಸರಿಯಲ್ಲವೆಂಬುದು ವಿವೇಕಿಗಳಿಗೆ ಗೊತ್ತಾದ ವಿಷಯವೇ ಆಗಿದೆ. ಇಂತಹ ಬಿಡಿಸಿಕೊಳ್ಳಲು ಸಾಧ್ಯವಲ್ಲದ (unavoidable circumstances) ಸಂದರ್ಭಗಳಲ್ಲಿ ದುಃಖಪಡುವುದು ವಿವೇಕಿಗಳ ಲಕ್ಷಣಗಳ

ಲಕ್ಷಣವಲ್ಲ. ಆ ತರಹ ದುಃಖಕ್ಕೆ ಕಾರಣವಾಗುವವರಿಗೆ ಯಾವ ಪಾಪವೂ ಬರುವುದಿಲ್ಲ.

ಜಾತಿಯ ಸ್ಥಾನಮಾನಗಳನ್ನು ನಾವು ಹೇಳುವಂತೆ ತಿಳಿಯುವವರಿಗೆ ಯಾವ ದ್ವೇಷಾಸೂಯೆಗಳಿಗೂ ಅವಕಾಶವಿಲ್ಲ. ಶಾಸ್ತ್ರದಲ್ಲಿ ಹೇಳಿರುವ 'ಜಾತಿ' ಪದಕ್ಕೆ ತೋರಿದಂತೆ ಅರ್ಥ ಮಾಡಿಕೊಂಡು ಪರಸ್ಪರ ದ್ವೇಷಾಸೂಯೆಗಳನ್ನು ಮಾಡುವವರು ಅರ್ಧತಿಳುವಳಿಕೆ ಅಪಾಯ (Half knowledge is always dangerous) ಎಂಬಂತೆ ಶಾಸ್ತ್ರ ಸಮ್ಮತವಾದ ಸರಿಯಾದ ಸ್ಥಾನಮಾನಗಳನ್ನು ತಿಳಿಯದವರು ತಾವೂ ಅಸಮಾಧಾನ ಮಾಡಿಕೊಂಡು ಇತರರಿಗೂ ಅಸಮಾಧಾನಕ್ಕೆ ಕಾರಣರಾಗುವುದಲ್ಲದೇ ಈ ಜಾತಿಗಳನ್ನು ನಿರ್ಮಾಣ ಮಾಡಿದ ದೇವರಿಗೂ ಪಕ್ಷ ಪಾತದೋಷ ಬರುವಂತೆ ಅರ್ಥಮಾಡಿಕೊಂಡು ದೇವರ ಅನುಗ್ರಹ ಕಳೆದುಕೊಂಡು ನರಕಾದಿಗಳಿಗೆ ಗುರಿಯಾಗುವುದರಲ್ಲಿ ಸಂದೇಹವಿಲ್ಲ. ದೇವರಿಂದ ನಿರ್ಮಿತವಾದ ಪ್ರಾಣಿಗಳ ಮಧ್ಯದಲ್ಲಿ ಒಂದೊಂದು ಜಾತಿಗೆ ವಿಷವು ಹಲ್ಲಿನಲ್ಲೋ , ಪುಚ್ಛದಲ್ಲೋ, ದೃಷ್ಟಿಯಲ್ಲೋ, ಉಸಿರಿನಲ್ಲೋ, ಸ್ಪರ್ಶದಲ್ಲೋ ಮತ್ತು ಒಂದು ಜಾತಿಗೆ ಮೈಯಲ್ಲೂ ಇರುತ್ತದೆ. ಹಾಗೆ ಒಬ್ಬೊಬ್ಬರಲ್ಲಿ ಒಂದೊಂದು ದೋಷ, ಒಂದೊಂದು ಕಾಲದಲ್ಲಿ ಇರುತ್ತಿದ್ದರೂ ಭಗವದ್ವೇಷಿಗಳು ಸರ್ವದೋಷಗಳಿಗೂ ನಿಧಿಗಳೆನಿಸುವರು. ಹೀಗಿದ್ದರೂ ಸ್ಪರ್ಶಮಾತ್ರದಿಂದ ಏನು ದೋಷ ಬರುವುದು ಎಂದು ಕೆಲವರು ಪ್ರಶ್ನಿಸುತ್ತಾರೆ. ಅಂತಹವರಿಗೆ ಮುಟ್ಟಿದರೆ ಮುನಿ (Touch me not) ಪ್ಲೇಗಿನಿಂದ ಸತ್ತ ಇಲಿಗಳು ಬುದ್ಧಿ ಕಲಿಸುತ್ತದೆ. ಇದರಂತೆ ಪಾಪಕ್ಕೆ ಕಾರಣವಾಗುವ ಎಂಜಲು, ಮುಸುರೆ, ಸೂತಕ ಮುಂತಾದವುಗಳಿಗೆ ಹೆದರುತ್ತಾ ಅವುಗಳ ಮರ್ಯಾದೆಯನ್ನು ಶಾಸ್ತ್ರದಿಂದಲೇ ತಿಳಿಯಬೇಕು. ಪಾಶ್ಚಾತ್ಯರು ಒಂದೇ ಕಪ್‌ಸಾಸರ್‌ನಲ್ಲಿ ಅನೇಕರಿಗೆ ಕಾಫಿ ಕೊಡುವುದಿಲ್ಲ. ಕಾರಣ ಅವುಗಳಲ್ಲಿ

ಸೂಕ್ಷ್ಮವಾದ (ಕಣ್ಣಿಗೆ ಕಾಣದ) ವಿಷಕ್ರಿಮಿಗಳಿದ್ದು ಹಲವು ಶುದ್ಧಿಮಾಡಿ ಕೊಡುತ್ತಾರೆ. ಅಂತೆಯೇ ಆ ಕ್ರಿಮಿಗಳಿಗಿಂತ ಸೂಕ್ಷ್ಮವಾದ ದೈತ್ಯರೂಪಗಳು ಪದಾರ್ಥಗಳಲ್ಲಿ ಸೇರಿಕೊಂಡು ಅಜ್ಞಾನವನ್ನು ಕೊಡುತ್ತವೆ. ಅದನ್ನು ನಾವು ಶಾಸ್ತ್ರದೃಷ್ಟಿಯಿಂದ ಅಥವಾ ಜ್ಞಾನಿಗಳ ಉಪದೇಶದ್ವಾರಾ ತಿಳಿಯಬೇಕಾಗಿದೆ. ಹೇಗೆ ಬಾಗಿಲನ್ನು ಎಷ್ಟೇ ಭದ್ರವಾಗಿ ಹಾಕಿರುವಾಗ ಯಾವ ಪ್ರಾಣಿಗಳಿಗೂ ಒಳಗೆ ಬರಲು ಅವಕಾಶವಿಲ್ಲದಿದ್ದರೂ ಪಿಶಾಚಿಗಳು (devils) ಒಳಗೆ ಬರಲು ಅವಕಾಶವುಂಟೋ ಹಾಗೆ ಅವುಗಳಿಗಿಂತ ಸೂಕ್ಷ್ಮವಾದ ದೈತ್ಯರು ಮತ್ತು ಶುದ್ಧತೆಗೆ ಕಾರಣರಾದ ದೇವತೆಗಳು ಸಂಚರಿಸಲು ಅವಕಾಶವುಂಟಾದ್ದರಿಂದ ಅವುಗಳನ್ನು ಸರ್ವಜ್ಞನಾದ ದೇವರ ಆಜ್ಞೆಯಿಂದಲೂ ಅಥವಾ ಜ್ಞಾನಶಕ್ತಿ ಯೋಗಶಕ್ತಿಗಳಿಂದ ಕೂಡಿದವರಿಂದಲೂ ತಿಳಿದು, ಹೇಗೆ ಲೌಕಿಕ ವಿಷಯದಲ್ಲಿ ವಿಜ್ಞಾನಿಗಳನ್ನು ನಂಬಿ ಅವರು ಬುದ್ಧಿಶಕ್ತಿಯಿಂದಲೂ ಯಂತ್ರಗಳ ಸಹಾಯದಿಂದಲೂ ತಿಳಿದು ಹೇಳಿದ್ದುದನ್ನು ನಾವು ನಂಬುತ್ತೇವೋ ಹಾಗೆಯೇ ಈ ವೇದಾಂತ ಸಾಮ್ರಾಜ್ಯದಲ್ಲೂ ದೇವರ ಅನುಗ್ರಹವನ್ನು ಬಯಸುವವರು ಜ್ಞಾನಿಗಳ ಮಾತನ್ನು ನಂಬಿ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಸನಾತನಧರ್ಮಗಳು ನಮ್ಮ ದುಃಖ ನಿವೃತ್ತಿಗೂ ಅಗಾಧವಾದ ಸುಖಕ್ಕೂ ಕಾರಣವೆಂದು ತಿಳಿಯಬೇಕೇ ವಿನಹ ಅವುಗಳಲ್ಲಿ ವಿರೋಧ ಚಿಂತಿಸಬಾರದು. ಮತ್ತೆ ಜಾತಿಯನ್ನು ದ್ವೇಷಿಸುವ ಕೆಲವರು ಮನುಶಾಸ್ತ್ರವನ್ನು ಸುಟ್ಟುಬಿಡಬೇಕೆಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಮ್ಮೆ ಒಬ್ಬ ರಾಜನು ಜ್ಯೋತಿಷ್ಕನಿಗೆ ತನ್ನ ಜಾತಕವನ್ನು ತೋರಿಸಿ ಭವಿಷ್ಯದ್ವಿಚಾರವನ್ನು ಹೇಳುವಂತೆ ಕೇಳಿದನು, ಆ ಜ್ಯೋತಿಷ್ಕನು ಪಂಚಾಂಗವನ್ನು ಇಟ್ಟುಕೊಂಡು ಗ್ರಹಗಳ ಗತಿಯನ್ನು ಪರಿಶೀಲಿಸಿ ರಾಜನಿಗೆ ಮುಂದೆ ಅನಿಷ್ಟಪ್ರಾಪ್ತಿಯ ಒಂದು ಯೋಗವಿದೆಯೆಂದು ತಿಳಿಸಿದನು. ಅದರಿಂದ ಕುಪಿತನಾದ ರಾಜನು ಆ ಪಂಚಾಂಗವನ್ನು ಸುಟ್ಟ ಮಾತ್ರಕ್ಕೆ ಗ್ರಹಗಳ

ಗತಿಯು ಬದಲಾಯಿಸುವುದೇ? ಈ ಸಂದರ್ಭದಲ್ಲಿ ರಾಜನ ವಿವೇಕ ಎಷ್ಟರ ಮಟ್ಟಿನದೆಂದು ತಿಳಿಯುತ್ತದೆ. ಅದರಂತೆ ಮನುಸ್ಮೃತಿಯನ್ನು ಸುಡಬೇಕೆಂಬುವವರ ಸ್ಥಿತಿಯು ಆಗುತ್ತದೆಯೆಂದು ತಿಳಿಯಬೇಕು. ಆದ್ದರಿಂದ ಆ ಸ್ಮೃತಿಗಳಲ್ಲಿ ಉಕ್ತವಾಗಿರುವಂತೆ ಯೋಗ್ಯವಾದ ಸಂಸ್ಕಾರ ಮಾಡಿಕೊಂಡು ಆಯಾ ಜಾತಿಗಳಿಗೆ ತಕ್ಕಂತೆ ಕರ್ಮಾನುಷ್ಠಾನ ಮಾಡುವುದಕ್ಕೆ ಅಧಿ ಕಾರಸಂಪಾದನೆ ಮಾಡಿ, ದೇವರ ಅನುಗ್ರಹ ಪಡೆದು ಶ್ರೇಯಸ್ಸನ್ನು ಹೊಂದಬೇಕು.

ದೇವರು ಈಗೆ ಕೊಟ್ಟಿರುವ ಜಾತಿಯಂತೆ ಕೆಲಸ ಮಾಡುತ್ತಾ ಮುಂದೆ ಅವನ ಅನುಗ್ರಹದಿಂದ ಉತ್ತಮಜಾತಿಸಂಪಾದನೆ ಮಾಡಿ ಅದರಂತೆ ಕೆಲಸ ಮಾಡುವುದಕ್ಕೆ ಅವಕಾಶ ಉಂಟು. ಈಗಲೇ ಉತ್ತಮರ ಕೆಲಸಕ್ಕೆ ಕೈಹಾಕಿದರೆ , ಪರಧರ್ಮಕ್ಕೆ ಕೈ ಹಾಕಿದಂತಾಗಿ Forgers ಕೆಲಸವನ್ನು ಮಾಡಿದವರಂತೆ ದೇವರ ಶಿಕ್ಷಾಕ್ಕೆ ಗುರಿಯಾಗುವರು. ಒಂದು ಕೆಲಸವನ್ನು ಚೆನ್ನಾಗಿ ಮಾಡಬಲ್ಲವನು ಮತ್ತೊಂದು ಕೆಲಸವನ್ನು ಕೊಟ್ಟರೂ ''ಆಳಾಗಬಲ್ಲವನು ಅರಸಾಗಬಲ್ಲ '' ಎಂಬಂತೆ ಅದನ್ನೂ ಚೆನ್ನಾಗಿ ನಿರ್ವಾಹ ಮಾಡಬಲ್ಲನು. ಕೊಟ್ಟಿರುವ ಕೆಲಸದಲ್ಲಿ ದೊಷ ಬುದ್ಧಿ ಉಳ್ಳವನು ಯಾವ ಕೆಲಸ ಕೊಟ್ಟರೂ ಅದರಲ್ಲೂ ದೋಷಬುದ್ಧಿಯನ್ನೇ ಮಾಡುವನು. ದೇವರು ಜೀವರ ಕರ್ಮಗಳನ್ನು ನಿಮಿತ್ತ ಮಾಡಿ ಉಚ್ಚನೀಚ ಜನ್ಮಗಳನ್ನು ಕೊಡುತ್ತಿರುತ್ತಾನೆ. ಅದು ಶಾಶ್ವತವಲ್ಲವೆಂದು ಹಿಂದೆ ಹೇಳಿದ್ದೇವೆ. ಹಾಗೆ ದೇವರು ಯಾವ ಜಾತಿಯನ್ನು ಕೊಟ್ಟರೂ ಆಯಾ ಜಾತಿಯಂತೆ ಕೆಲಸ ಮಾಡುತ್ತಾ (ಉತ್ತರಮುಖಿಯು Magnetic compass ) ಯಾವ ಸ್ಥಳದಲ್ಲಿ ( Position) ಇಟ್ಟರೂ ಉತ್ತರ ದಿಕ್ಕಿಗೆ ತಿರುಗುವಂತೆ ದೇವರ ಪ್ರೀತಿಯಲ್ಲಿ ಮಾತ್ರ ದೃಷ್ಟಿ ಇರುವವರಿಗೆ ದೇವರು ಬೇಗ ಅನುಗ್ರಹ ಮಾಡುತ್ತಾನೆ. ಜಾತಿ ಶಾಸ್ತ್ರದಲ್ಲಿ ಹೇಳಿಲ್ಲ ಎಂಬುವರೂ ಅದು ಒಂದು ವೇಳೆ

ಹೇಳಿದ್ದರೂ ಪರಸ್ಪರ ವೈಷಮ್ಯಕ್ಕೂ ಕ್ರಾಂತಿಗೂ ಕಾರಣವಾದದ್ದೆಂದು ಆದ್ದರಿಂದಲೇ ಅದನ್ನು ಅಳಿಸಿಬಿಡಬೇಕು ಎಂದು ಹೇಳುವವರು ಅಥವಾ ಜಾತಿಯೇ ಒಂದು ದೊಡ್ಡದೆಂದು ದುರಹಂಕಾರ ಪಡುವವರು ಇಂತಹ ಇಬ್ಬರೂ (stwo extremes are bad ಎಂಬಂತೆ ) ಅವಿವೇಕಿಗಳೇ ಸರಿ. ಆದ್ದರಿಂದ ಯಾವುದರಲ್ಲೂ ಅತಿ ವಿಶ್ವಾಸವಿಲ್ಲದೆ ದೇವರು ನಮಗೆ ಒದಗಿಸಿಕೊಡುವುದೆಲ್ಲವೂ (ತಂದೆ ತಾಯಿಗಳು ಮಕ್ಕಳಿಗೆ ಕೊಡುವ ಸಿಹಿಯಾದ ತಿಂಡಿಯು ಕಹಿಯಾದ ಔಷಧಿಯು ಹೇಗೆ ಮಕ್ಕಳ ಶ್ರೇಯಸ್ಸಿಗೆ ಕಾರಣವಾದದ್ದೋ ಹಾಗೆ ನಮ್ಮ ಶ್ರೇಯಸ್ಸಿಗೆ  ಕಾರಣವಾದದ್ದೆಂದು. ತಿಳಿಯುವವರು ವಿವೇಕಿಗಳೆನಿಸುವರು. ಆದ್ದರಿಂದ  ದೇವರ ಅನುಗ್ರಹಸಂಪಾದನೆ ಮಾಡಬಯಸುವವರು ಮಾಡಬೇಕಾದ ಧರ್ಮಕಾರ್ಯಗಳ ಮಧ್ಯದಲ್ಲಿ ಅವರವರ ಜಾತಿ ಉಳಿಸಿಕೊಳ್ಳುವುದೇ ಮೊದಲನೆಯ ಧರ್ಮವಾಗಿದೆ.

7. ವರ್ಣಾಶ್ರಮಧರ್ಮಗಳ ಅವಶ್ಯಕತೆ

ಲೋಕದಲ್ಲಿ ಹಣ್ಣುಗಳನ್ನು ತಿಂದರೆ ಬಲ ಬರುತ್ತದೆ ಎಂಬ ಮಾತಿದೆ. ಊಟವನ್ನು ಮಾಡಿದ ಮೇಲೆ ಹಣ್ಣು ತಿನ್ನುವವರಿಗೆ  ಬಲ ಬರುತ್ತದೆ ಎಂದು ಅವರ ಅಭಿಪ್ರಾಯವೇ ವಿನಹ, ಊಟ ಮಾಡದೇ ಬರೀ ಒಂದು ಹಣ್ಣು ತಿಂದವರಿಗೆಲ್ಲಾ ಬಲ ಬರುತ್ತದೆ ಎಂಬ ಅಭಿಪ್ರಾಯವಲ್ಲ ಅದರಂತೆ  ಸ್ವಧರ್ಮಾನುಷ್ಠಾನ ನಮಗೆ ಭೋಜನಸದೃಶವಾದದ್ದು. ಆದ್ದರಿಂದ ತಮ್ಮ ವರ್ಣಾಶ್ರಮಧರ್ಮಗಳನ್ನು ಉಳಿಸಿಕೊಂಡಮೇಲೆ  ಮಾಡುವ ಪರೋಪಕಾರ ಮೊದಲಾದ ಧರ್ಮಗಳಿಗೆ ದೇವರ ವಿಶೇಷ ಅನುಗ್ರಹ ಆಗುತ್ತದೆಯೇ ವಿನಹ ಸ್ವಧರ್ಮಪರಿತ್ಯಾಗ ಮಾಡಿದವರಿಗೆ ಆಗುವುದಿಲ್ಲ.

ಪತಿವ್ರತಾ ಸ್ತ್ರೀಯಾದವಳು ತನ್ನ ಗಂಡನು ವಿದ್ಯಾ, ಧನ, ರೂಪ, ಆರೋಗ್ಯ, ಇದೇ ಮೊದಲಾದ ಗುಣಗಳಿಂದ ಹೀನನಾಗಿದ್ದರೂ ಅವನನ್ನು ತಿರಸ್ಕರಿಸಬಾರದು. ಅವಳಿಗೆ ತನ್ನ ಗಂಡನ ಸೇವಯೇ ಮುಖ್ಯ ಕಾರ್ಯವೆಂದು ಹೇಳಿದ್ದರೂ ; ಆ ಪತಿಯು ಪತಿತನಾದಾಗ (ಜಾತಿ ಭ್ರಷ್ಟನಾದಾಗ) ಅವನ ಸೇವೆಯನ್ನು ಬಿಡಬಹುದೆಂದು ಹೇಳಲ್ಪಟ್ಟಿದೆ. ಅಂದರೆ ಗಂಡಸರು ತಮ್ಮ ಜಾತಿಧರ್ಮವನ್ನು ಬಿಟ್ಟಿರುವಾಗ ಪತಿತರೆನಿಸಿ ತ್ಯಾಜ್ಯರೆನಿಸುವರು. ಗಿಡ, ಮರ, ಪಕ್ಷಿ, ಪಶುಗಳೂ ಮನುಷ್ಯರಾಗಿ ಹುಟ್ಟಿ ಶಾಸ್ತ್ರಜ್ಞಾನ ಸಂಪಾದನದ್ವಾರಾ ಮೋಕ್ಷ ಹೊಂದುವುದಕ್ಕೆ ಅವಕಾಶವಿರುವಾಗ ಅಧಮಜಾತಿಯವರು ಬ್ರಾಹ್ಮಣರಾಗಿ ವೇದಶಾಸ್ತ್ರಾದಿಗಳನ್ನು ಓದಿ ದೇವರಲ್ಲಿ ಭಕ್ತಿ ಮಾಡಿ ಉದ್ಧಾರಹೊಂದುವುದಕ್ಕೆ ಪೂರ್ಣ ಅವಕಾಶ ಇರುವುದೆಂದು ಬಿಡಿಸಿ ಹೇಳಬೇಕಾಗಿಲ್ಲ.

ಮನುಷ್ಯಜನ್ಮವು ಉತ್ತಮವಾದದ್ದು. ಅದರಲ್ಲೂ ಶಾಸ್ತ್ರಾಧಿಕಾರ ಉಳ್ಳ ದ್ವಿಜರು ಶ್ರೇಷ್ಠರು. ಇನ್ನೂ ವಿಶೇಷವಾಗಿ ಶಾಸ್ತ್ರೋಪದೇಶ ಮಾಡುವ ಅಧಿಕಾರಉಳ್ಳ ಬ್ರಾಹ್ಮಣರ ಜನ್ಮ ಬಂದಾಗಲೂ ಶಾಸ್ತ್ರವನ್ನು ಅಭ್ಯಾಸ ಮಾಡಿ ದೇವರ ಪರಮಾನುಗ್ರಹಕ್ಕೆ ಕಾರಣವಾದ ಭಕ್ತಿಯನ್ನು ಸಂಪಾದನೆ ಮಾಡದವನು ಅಧೋಗತಿಯನ್ನು ಹೊಂದುವನೆಂದು ಶ್ರೀಕೃಷ್ಣನು ತಿಳಿಸಿದ್ದಾನೆ. ಮೋಕ್ಷಹೊಂದುವ ಸಾಧನೆಯನ್ನು ಮಾಡಿ ಕೊಳ್ಳುವುದಕ್ಕೋಸ್ಕರ ಮನುಷ್ಯಜನ್ಮವನ್ನು ಉತ್ತಮಜಾತಿಯನ್ನು ದೇವರು ಎಲ್ಲರಿಗೂ ಒಂದಲ್ಲಾ ಒಂದು ಕಾಲದಲ್ಲಿ ಒದಗಿಸಿಕೊಡುತ್ತಾನೆ.

ವಿಶೇಷದೇವರಅನುಗ್ರಹದಿಂದ ಸುಖಪಡುವ ಪ್ರಾಣಿವರ್ಗದವರೂ ಪಕ್ಷಿವರ್ಗದವರೂ ಆದ ನಂದಿಕೇಶ್ವರ, ಗಣಪತಿವಾಹನವಾದ ಮೂಷಿಕ, ಸರಸ್ವತೀದೇವಿಯವರ ವಾಹನವಾದ ನವಿಲು, ಬ್ರಹ್ಮದೇವರ ವಾಹನವಾದ ಹಂಸ, ವಿಷ್ಣುವಾಹನವಾದ ಗರುಡ, ಯಮನ ವಾಹನವಾದ ಕೋಣ,

ಅಗ್ನಿವಾಹನವಾದ ಮೇಕೆ, ವಾಯುವಾಹನವಾದ ಜಿಂಕೆ, ದುರ್ಗಾವಾಹನವಾದ ಹುಲಿ ಮುಂತಾದ ಪ್ರಾಣಿಗಳು; ಉತ್ತಮಮಜಾತಿಯವರೆನಿಸಿದ ಬ್ರಾಹ್ಮಣರಿಂದಲೂ, ಪೂಜ್ಯವಸ್ತುಗಳೆನಿಸಿ ಬ್ರಾಹ್ಮಣರಿಗಿಂತ ಲಕ್ಷಕೋಟಿಗುಣಗಳಷ್ಟು ಹೆಚ್ಚಿಗೆ ಸುಖ ಪಡೆಯುವವರಾಗಿದ್ದಾರೆ. ಈ ವಿಷಯಗಳನ್ನೆಲ್ಲಾ ಚೆನ್ನಾಗಿ ಗಮನಿಸಿದರೆ, ನಮಗೆ ವಿವೇಕವಿಲ್ಲದೆ ಬರುವ, ಜಾತಿನಿಮಿತ್ತವಾದ ಅಹಂಕಾರವೂ, ದ್ವೇಷವೂ ತೊಲಗುವುದರಲ್ಲಿ ಸಂದೇಹವಿಲ್ಲ. ನಾವು ಮೋಕ್ಷ ಹೊಂದಿದ ಮೇಲೂ, ನಮ್ಮ ಗುರಗಳು, ಅವರಿಗಿಂತ ಉತ್ತಮರಾದ ಋಷಿಗಳು, ನಾನಾವರ್ಗದಿಂದ ಕೂಡಿರುವ ದೇವತೆಗಳು, ಸರ್ವೋತ್ತಮನಾದ ದೇವರು ಇವರುಗಳಿಗೆ ಅಧೀನರಾಗಿಯೇ ಅವರ ಸೇವಾದಲ್ಲೇ ನಿರತರಾಗಿರ ಬೇಕಾದ ಸಂದರ್ಭ ಬರುವಾಗ, ನಾವು ಒಂದು ರೀತಿಯ ನಿತ್ಯ ಶೂದ್ರರು (ಸೇವಕರು) ಎಂದರೆ ಯಾವ ವಿರೋಧವೂ ಇರಲಾರದು.

ಮೋಕ್ಷದಲ್ಲಿ ನಮಗಿಂತ ಕಮ್ಮಿಯಾದ ಜೀವರುಗಳ ಸೇವೆಯನ್ನು ತೆಗೆದುಕೊಂಡು, ಅವರ ಯೋಗ್ಯತಾನುಸಾರ ದೇವರ ಮಹಿಮೆಯನ್ನು ಅವರಿಗೆ ಹೇಳುತ್ತಾ, ನಾವೂ ಸಂತೋಷಪಡುತ್ತಾ, ಅವರನ್ನು ಸಂತೋಷ ಪಡಿಸುತ್ತಾ ಇರುವ ಸಂದರ್ಭದಲ್ಲಿ ಹಣಕ್ಕೆ ತಕ್ಕಂತೆ ಮಾಲು ಕೊಡುವ ವೈಶ್ಯವೃತ್ತಿಯು ನಮಗೆ ಇದ್ದಂತೆ ಆಗುವುದು. ದೊಡ್ಡವರ ಸನ್ನಿಧಾನದಲ್ಲಿ ನಾವು ಮತ್ತೊಬ್ಬರಿಗೆ ಉಪದೇಶ ಮಾಡುವುದಕ್ಕೆ ಹೊರಡದೆ, ದೊಡ್ಡವರಿಂದಲೇ ಉಪದೇಶ ಹೊಂದುತ್ತಿರುವಾಗಲೂ, ಸಾಧನಜನ್ಮಗಳು ಬಂದಾಗ ದೇವರ ಭಕ್ತರಿಗೆ ಪ್ರೋತ್ಸಾಹ ಕೊಡುತ್ತಾ, ಅವರ (ಭಕ್ತರ) ವಿರೋಧಿಗಳನ್ನು ದಮನ ಮಾಡುತ್ತಾ ಇರುವ ಸಂದರ್ಭದಲ್ಲಿ ನಾವೇ ನಿತ್ಯಕ್ಷತ್ರಿಯರೆನಿಸುವೆವು. ಲೋಕವಿಲಕ್ಷಣಸಾಮರ್ಥ್ಯೋಪೇತವಾದ ದೇವರ ಮಹಿಮೆಗಳನ್ನು ನಾವು

ತಿಳಿದು ಸುಖಪಡುತ್ತಾ, ಇನ್ನೊಬ್ಬರಿಗೂ ಹೇಳಿ ಸುಖ ಪಡಿಸುತ್ತಿರುವ ಸಂದರ್ಭದಲ್ಲಿನಾವೇ ನಿತ್ಯಬ್ರಾಹ್ಮಣರೆನಿಸುವೆವು. ಇದಕ್ಕೆ ಹೊರಗಿನ ಈ ಶರೀರದ ಜಾತಿಯೇ ಮುಖ್ಯ ಕಾರಣವಲ್ಲ; ಜೀವನ ಯೋಗ್ಯತೆಯೇ ಅತಿಮುಖ್ಯವಾದದ್ದು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಕನಕದಾಸರು ''ಕುಲ ಕುಲವೆಂದು ಹೊಡೆದಾಡದಿರಿ ಹುಚ್ಚಪ್ಪಗಳಿರಾ. ಜೀವ ಯಾವ ಕುಲ, ಏನಾದರೂ ಅರಿತಿರಾ '' ಎಂದಿದ್ದಾರೆ. ಹೊರತು ಮೇಲಿನ ಶರೀರಕ್ಕೆ ಜಾತಿ ಇಲ್ಲಾ ಎಂಬುದು ಅವರ ಅಭಿಪ್ರಾಯವಲ್ಲ. ಬ್ರಹ್ಮಜ್ಞಾನ ಉಳ್ಳವರನ್ನೇ ಬ್ರಾಹ್ಮಣರೆಂದು ಶಾಸ್ತ್ರದಲ್ಲಿ ವ್ಯವಹರಿಸುತ್ತಿರುವಾಗ, ವಿಶೇಷಬ್ರಹ್ಮಜ್ಞಾನಿಯಾದ ಕನಕನು ಗುಣಬ್ರಾಹ್ಮಣ ಎಂಬುದಕ್ಕೆ ಯಾವ ಸಂದೇಹವೂ ಇಲ್ಲ. ಅವನನ್ನು ಕೇವಲ ಕುರುಬನೆನ್ನುವವರು, ಗುಣದಿಂದ ಕುರುಬರೇ ಸರಿ. ಹೀಗೆಯೇ ಜಾತಿಯ ಧರ್ಮಗಳನ್ನು ಚೆನ್ನಾಗಿ ತಿಳಿಯಬಯಸುವವರು ಉತ್ಪತ್ತಿನಿಮಿತ್ತವಾದ, ಗುಣನಿಮಿತ್ತವಾದ, ಕರ್ಮನಿಮಿತ್ತವಾದ ಜಾತಿಗಳನ್ನು ತಿಳಿದು ಅವುಗಳ ಸ್ಥಾನಮಾನಕ್ಕೆ ತೊಂದರೆ ಬರದಂತೆ ವರ್ತಿಸಿದರೆ ಕ್ಷಿಪ್ರದಲ್ಲಿ ದೇವರ ಅನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂದೇಹವಿಲ್ಲ.

ಪತಿವ್ರತಾಸ್ತ್ರೀಯರು ತಮ್ಮ ಪತಿಯು ಅರಮನೆಯಲ್ಲಿರಲಿ, ಕಾಡಿಗೆ ಹೋಗಲಿ, ಎಷ್ಟೇ ಸಂಪತ್ತಿನ ಮಧ್ಯದಲ್ಲಿರಲಿ, ವಿಪತ್ತಿಗೆ ಗುರಿಯಾಗಿರಲಿ, ಗಂಡನ ಜೊತೆಯಲ್ಲೇ ಇರಬೇಕೆಂದು ಬಯಸುತ್ತಾರೆ. ಪೃಥುಚಕ್ರವರ್ತಿಯ ಹೆಂಡತಿ ಅರ್ಚಿದೇವಿಯು, ನಳಮಹಾರಾಜನ ಹೆಂಡತಿ ದಮಯಂತಿ, ಹರಿಶ್ಚಂದ್ರನ ಹೆಂಡತಿ ಚಂದ್ರಮತಿ, ಶ್ರೀರಾಮಚಂದ್ರದೇವರ ಹೆಂಡತಿ ಸೀತಾದೇವಿ ಇವರೇ ಮೊದಲಾದವರು ಉದಾಹರಣೆಯಾಗಿ ದೊರಕುತ್ತಿದ್ದಾರೆ. ಹಾಗೆಯೇ ದೇವರ ಭಕ್ತರು ಎಷ್ಟೇ ವಿಪತ್ತು ಬರಲಿ, ನೀಚಜಾತಿ ಬರಲಿ ಹೆದರದೆ ಪರಮಾತ್ಮನು ತಮ್ಮ

ಸೇವೆಯನ್ನು ಸ್ವೀಕರಿಸಿದರೆ ಮಾತ್ರ ಸಾಕು, ಅನ್ನುವವರೇ ವಿನಹ ದೇವರ ಸೇವೆ ದೊರಕದ ಉತ್ತಮಜಾತಿಯನ್ನು ಇತರ ಯಾವ ಸಂಪತ್ತನ್ನೂ ಬಯಸುವುದಿಲ್ಲ.

ದೇವರು ದೋಷರಹಿತನಾಗಿ ಗುಣಪೂರ್ಣನಾಗಿರುವುದರಿಂದ ಅಜಿತೇಂದ್ರಿಯತ್ವಾದಿ ದೋಷರಹಿತರಾಗಿ ಸ್ವಲ್ಪವಾದರೂ ವೈರಾಗ್ಯ ಜ್ಞಾನಭಕ್ತಿಗಳಿಂದ ಕೂಡಿರುವವರಿಗೆ ಅನುಗ್ರಹ ಮಾಡುವ ಸ್ವಭಾವವುಳ್ಳವನಾಗಿದ್ದಾನೆ. ಈ ಗುಣಗಳನ್ನು ಸಂಪಾದನೆ ಮಾಡುವುದಕ್ಕೆ ಉತ್ತಮೋತ್ತಮಜಾತಿಗಳಲ್ಲಿ ಸಾಮಗ್ರಿಗಳು ಹೆಚ್ಚಿಗೆ ಇರುವುದರಿಂದ ಜಾತಿಗೆ ಉತ್ತಮತ್ವವು ತಾರತಮ್ಯವಿಲ್ಲ. ಆ ಉತ್ತಮಜಾತಿಯಲ್ಲಿ ಹುಟ್ಟಿದವರು ಅಂತಹ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ದೇವರಲ್ಲಿ ಹೆಚ್ಚಿಗೆ ಭಕ್ತಿಸಂಪಾದನೆ ಮಾಡಿದರೆ ಅವರು ಮಾನ್ಯರೇ ಆಗುವರು. ಹಾಗೆ ಆ ಸಾಮಗ್ರಿಗಳನ್ನು ಉಪಯೋಗಿಸಿಕೊಳ್ಳದೇ ಇರುವವರಿಗಿಂತ ಅಲ್ಪಸಾಮಗ್ರಿಯುಳ್ಳ ನೀಚಜಾತಿಯವರು ತಮ್ಮಲ್ಲಿರುವಷ್ಟನ್ನು ಉಪಯೋಗಿಸಿಕೊಂಡು ಭಕ್ತಿಸಂಪಾದನೆ ಮಾಡಿದರೆ ಉತ್ತಮಜಾತಿಯವರಿಗಿಂತ ಆ ನೀಚ ಜಾತಿಯವರೇ ಉತ್ತಮರೆನಿಸುವರು.

ದೇವರ ಭಕ್ತಿ ಬಯಸುವವರಿಗೆ ಅವರವರ ಜಾತಿಯನ್ನು ಉಳಿಸಿಕೊಳ್ಳುವುದು ಮೊದಲನೆಯ ಮುಖ್ಯಕರ್ತವ್ಯವಾಗಿದೆಯೋ ಹಾಗೆಯೇ ವರ್ಣಾಶ್ರಮಧರ್ಮಗಳನ್ನು ಮಾಡುತ್ತಿರುವುದು ಎರಡನೆಯದಾದ ಮುಖ್ಯ ಕರ್ತವ್ಯವಾಗಿದೆ.

## 9. ಜ್ಞಾನಸಂಪಾದನೆಯ ಅವಶ್ಯಕತೆ ಮತ್ತು ಅದರ ಮಾರ್ಗ ಅದರಿಂದ ದೊರಕುವ ಮಹಾಫಲ

ದೇವರು ತಾನು ಭಕ್ತಿಗೆ ಮಾತ್ರ ದೊರಕುವವನೆಂದು ಹೇಳಿಕೊಂಡಿದ್ದಾನೆ. ಭಕ್ತಿ ಎಂದರೆ ಶ್ರೀಕೃಷ್ಣನು ಜ್ಞಾನಿಗಳ ಕಂಡರೆ ತನಗೆ ಪ್ರೀತಿ ಎಂದು. ಜ್ಞಾನಿಗಳಿಗೆ ತಾನು ಪ್ರೀತ್ಯಾಸ್ಪದನೆಂದೂ ಹೇಳಿಕೊಂಡಿದ್ದಾನೆ. ಆದ್ದರಿಂದ ದೇವರ ಪ್ರೀತಿಸಂಪಾದನೆ ಮಾಡಬೇಕೆಂಬ ಅಪೇಕ್ಷೆಯುಳ್ಳವರು ಜ್ಞಾನವನ್ನು ಅತ್ಯಾವಶ್ಯಕವಾಗಿ ಸಂಪಾದನೆ ಮಾಡಬೇಕು. ಲೋಕದಲ್ಲಿ ತಂದೆತಾಯಿಗಳು ಮಕ್ಕಳು ಒಂದು ಗಾಡಿ ಕಟ್ಟಿಗೆ ಒಡೆದುಹಾಕಿದರೆ ಎಷ್ಟು ಸಂತೋಷಪಡುತ್ತಾರೋ ಅದಕ್ಕಿಂತ ಹೆಚ್ಚಿಗೆ ಸಂತೋಷ ಒಂದು ಸಣ್ಣ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾಗ ಆಗುವುದು ಕಂಡುಬರುತ್ತದೆ. ಅದರಂತೆ ಪುಣ್ಯಕೆಲಸಗಳನ್ನು ಮಾಡುವುದಕ್ಕಿಂತ ಯಥಾರ್ಥವಾದ ಜ್ಞಾನಸಂಪಾದನೆ ಮಾಡುವುದುರಿಂದ ಹೆಚ್ಚಿಗೆ ದೇವರ ಪ್ರೀತಿ ಹೊಂದಬಹುದಾಗಿದೆ ಜ್ಞಾನವನ್ನು ಅಮೃತಕ್ಕೆ ಹೋಲಿಸುವುದು ಕಂಡುಬರುತ್ತಿದೆ. ಶುದ್ಧವಾದ ಪಾತ್ರೆಯಲ್ಲಿ ಹಾಲನ್ನು ಹಾಕಿಸಿಕೊಂಡರೆ ಹಾಲಿನಿಂದ ಉಂಟಾಗುವ ನಾಲಿಗೆರುಚಿಸುಖವನ್ನೂ ಶರೀರಬಲವನ್ನೂ ಹೊಂದಬಹುದು. ಕಲುಷಿತವಾದ ಪಾತ್ರೆಯಲ್ಲಿ ಹಾಲನ್ನು ತೆಗೆದುಕೊಂಡಾಗ ಅದು ಒಡೆದು ಹೋಗಿರುಚಿ ಬಲಗಳಿಗೆ ಕಾರಣವಾಗದೆ, ಅನಾರೋಗ್ಯಕ್ಕೂ ಕಾರಣವಾಗುವುದ. ಹಾಗೆಯೇ ನಮ್ಮ ಮನಸ್ಸು ವಿಷಯದೂಷಿತ (ಅಂದರೆ ಕಾಮ, ಕ್ರೋದ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳಿಂದ ಕೂಡಿ)ವಾಗಿರುವಾಗ ಪೂರ್ವದಲ್ಲಿ ಹೇಳಿದ ಶಾಸ್ತ್ರಗಳನ್ನು ಓದಿದಾಗ್ಯೂ ದೇವರ ಮತ್ತು ಪ್ರಪಂಚದ ಸರಿಯಾದ ಜ್ಞಾನ ಬರದೇ ವಿಪರೀತಜ್ಞಾನ (ತಪ್ಪು ತಿಳಿವಳಿಕೆ) ಬಂದು ನರಕಾದಿಗಳಿಗೆ ಗುರಿಯಾಗುವುದು ಉಂಟು. ದೇವರು ತನ್ನ ಅಜ್ಞಾ ಮೀರಿ ನಡೆಯುವುದರಿಂದ ಬರುವ ಪಾಪಗಳಿಗೆ ಕೊಡುವ ಶಿಕ್ಷೆಗಿಂತ, ವಿಪರೀತಜ್ಞಾನದಿಂದ ಬರುವ ಪಾಪಕ್ಕೆ ಹೆಚ್ಚಿಗೆ ಶಿಕ್ಷೆಕೊಡುತ್ತಾನೆ. ದೇವರು ಅತೀಂದ್ರಿಯಪದಾರ್ಥನಾದುದರಿಂದ ಅವನ ವಿಷಯಗಳನ್ನು ಶಾಸ್ತ್ರಗಳಿಂದಲೇ

ತಿಳೀಯಬೇಕು. ಆ ಶಾಸ್ತ್ರಗಳು ಯವುವೆಂದರೆ ವೇದಗಳು, ವೇದಾಂತ, ಇತಿಹಾಸ, ಸಾತ್ವಿಕಪುರಾಣಗಳು ಮಾತ್ರವೇ ವಿನಹ ರಾಜಸ ತಾಮಸ ಪುರಾಣಾದಿಗಳಲ್ಲಿ, ಆ ಗ್ರಂಥಗಳನ್ನು ಅವರವರೇ ಓದಿಕೊಂಡರೆ ಜ್ಞಾನವೃದ್ಧಿಯಾಗಲಾರದು. ದೇವರು ಗುರುಗಳ ದ್ವಾರವೇ ಜ್ಞಾನ ಕೊಡುವೆನು ಎಂಬ ನಿಯಮವುಳ್ಳವನಾದ್ದರಿಂದ ಅವನಲ್ಲಿ ಭಕ್ತಿ ಜ್ಞಾನಗಳಿಂದ ಕೂಡಿರುವ ಆವನಿಗೆ ಇಷ್ಟವಾದ ಸತ್ಯ ಧರ್ಮ ಮೊದಲಾದ ಗುಣಗಳಲ್ಲಿ ಆಸಕ್ತರಾದ ಪರಮಹಿಂಸಾದಿಗಳಿಂದ ರಹಿತರಾದ, ನಮಗಿಂತ ಹೆಚ್ಚಿಗೆ ಜ್ಞಾನವುಳ್ಳವರೇ ಪರೀಕ್ಷಿಸಿ ಗುರುಗಳನ್ನಾಗಿ ಸ್ವೀಕರಿಸಬೇಕು, ಅಂತಹ ಗುರುಗಳಲ್ಲಿ ದೇವರ ಸನ್ನಿಧಾನವಿಶೇಷ ಇರುವುದೆಂದು ನಂಬಿ ಆವರಿಗೆ ಅತ್ಯಂತವಿಧೇಯರಾಗಿ ನಡೆದುಕೊಳ್ಳಬೇಕು.

ಪ್ರಕೃತ ಪಾಪಕರ್ಮಗಳು ಜ್ಞಾನಸಂಪಾದನೆಗೆ ವಿಘ್ನವಾದವುಗಳು. ಆದ್ದರಿಂದ ಮೋಕ್ಷಕ್ಕೆ ಕಾರಣವಾದ ದೇವರ ಜ್ಞಾನಸಂಪಾದನೆ ಮಾಡಬೇಕೆಂಬ ಅಪೇಕ್ಷೆ ಉಳ್ಳವರು ಪಾಪಕರ್ಮಗಳನ್ನು ಮಾಡಬಾರದು. ಮನಃ ಶುದ್ಧಿಯನ್ನು ಸಂಪಾದಿಸುವುದಕ್ಕೋಸ್ಕರ ಪುಣ್ಯಕರ್ಮಗಳನ್ನು ಮಾಡ ಬೇಕು. ಆ ಪುಣ್ಯಕರ್ಮಗಳಲ್ಲಿ ಮುಖ್ಯವಾದದ್ದು ಅವರವರ ಜಾತಿ ಮತ್ತು ಆಶ್ರಮಗಳ ಧರ್ಮಗಳಾಗಿವೆ. ಆ ಧರ್ಮಗಳನ್ನು ವಿಶೇಷವಾಗಿ ಮಾಡಲು ಅಶಕ್ತರಾದವರು ಮತ್ತೊಬ್ಬರ ಧರ್ಮಕ್ಕೆ ಕೈಹಾಕದೇ ತಮ್ಮ ಧರ್ಮವನ್ನು ಸ್ವಲ್ಪವಾದರೂ ಮಾಡುತ್ತಾ ಆ ಕರ್ಮವನ್ನು ದೇವರಿಗೆ ಸರ್ಮಪಣೆ ಮಾಡುತ್ತಾ ಬಂದರೆ ದೇವರು ಅಂತಹವರಿಗೆ ಜ್ಞಾನ ಕೊಟ್ಟು ಉದ್ಧಾರ ಮಾಡುವನು.

ಎಷ್ಟು ತರಹದ ಪ್ರಾಣಿಗಳಿದ್ದರೂ ಗಂಡು, ಹೆಣ್ಣು ಎಂಬ ಎರಡೇ ಪಂಗಡಗಳಿರುವಂತೆ . 84 ಲಕ್ಷ ತರಹ ಜೀವರುಗಳು ಇದ್ದರೂ ಅವರುಗಳು ದೇವರ ಭಕ್ತರು. ವಿಷಯಾಸಕ್ತರು, ದ್ವೇಷಿಗಳು ಎಂಬುದಾಗಿ ಈ ಮೂರು ಪಂಗಡಗಳಲ್ಲೇ ಸೇರುತ್ತಾರೆ. ಮನುಷ್ಯಜನ್ಮ ಬಂದಾಗ ಮಾತ್ರವೇ ದೇವರ

ಅನುಗ್ರಹಕ್ಕೆ ಕಾರಣವಾದ ಜ್ಞಾನಸಂಪಾದನೆ ಮಾಡಿ ಮೋಕ್ಷ ಹೊಂದುವ ಮಾರ್ಗವನ್ನು ಹೊಂದಬಹುದಾದ್ದರಿಂದ ಎಲ್ಲ ಜನ್ಮಗಳಿಗಿಂತಲೂ ಮನುಷ್ಯಜನ್ಮವು ಉತ್ತಮ ಜನ್ಮವೆಂದೆನಿಸುತ್ತದೆ. ಎಲ್ಲರನ್ನೂ ಸೃಷ್ಟಿ ಮಾಡುವ ದೇವರು ಪಕ್ಷಪಾತರಹಿತನಾದ್ದರಿಂದ ಎಲ್ಲ ಸ್ಥಾವರಜಂಗಮ ಪ್ರಾಣಿಗಳಿಗೂ ಒಂದಲ್ಲಾ ಒಂದು ದಿನ ಮನುಷ್ಯಜನ್ಮವನ್ನು ಕೊಟ್ಟು ಮೇಲ್ಕಂಡ ಮೂರು ಪಂಗಡಗಳ ಮಧ್ಯದಲ್ಲಿ ಅವರು ಯಾವ ಸ್ವಭಾವ ಉಳ್ಳವರೆಂಬುದನ್ನು ಪ್ರಕಾಶಪಡಿಸಿ ನಂತರ ಅವರವರ ಯೋಗ್ಯತಾನುಗುಣವಾದ ಸ್ಥಾನಗಳನ್ನು ಕೊಡುತ್ತಾನೆ. ಲೋಕದಲ್ಲಿ ಕೆಲವರು ಸರಿಯಾದ ತಯಾರಿಕೆ, ಪ್ರೋತ್ಸಾಹ ಕೊಡುವುದು ಇವುಗಳಿಂದ ಜೀವರ ಕೆಟ್ಟಗುಣಗಳನ್ನು ಬದಲಾಯಿಸಬಹುದೆಂದು ತಿಳಿದಿದ್ದಾರೆ. ತಾವೇ ಸ್ವಭಾವಕ್ಕೆ ನಾಶವಿಲ್ಲ (Nature cannot be destroyed) ಎಂಬುದಾಗಿ ಹೇಳುತ್ತಿದ್ದರೂ, ಬೇವಿನ ಬೀಜಕ್ಕೆ ಸಕ್ಕರೆಯ ಪಾತಿ ಮಾಡಿ, ಹಾಲು ಹಾಕುತ್ತಿದ್ದರೂ ಅದು ಗಿಡವಾಗಿ ಸಿಹಿಯಾದ ಫಲಗಳನ್ನು ಕೊಡುವುದಿಲ್ಲ ಎಂಬುದಾಗಿ ತಿಳಿದಿದ್ದರೂ, ಕಳ್ಳರಿಗೂ ಅನುಕೂಲ ಮಾಡಿ ಪ್ರೋತ್ಸಾಹಕೊಟ್ಟರೆ ಆವರು ದುರ್ಬುದ್ಧಿಯನ್ನು ಬಿಟ್ಟು ಸನ್ಮಾರ್ಗಕ್ಕೆ ಬರುವರೆಂದು ಹೇಳುತ್ತಿರುವುದನ್ನು ಕೇಳಿದರೆ ಆಶ್ಚರ್ಯವಾಗಲಾರದೇ ?

ಜೀವರುಗಳ ಮಧ್ಯದಲ್ಲಿ , ಶಾಸ್ತ್ರದಲ್ಲಿ ಹೇಳಿರುವ ರೀತಿಯಿಂದ ದೇವರೇ ಸಕಲಜಗತ್ತಿಗೆ ತಂದೆ ತಾಯಿ, ಗುರು, ಸ್ವಾಮಿ ಗತಿ ಎಂದು ಭಾವಿಸುವವರೆಲ್ಲರೂ ಅವನ ಅನುಗ್ರಹದಿಮದ ಮೋಕ್ಷ (ಶಾಶ್ವತ ಸುಖ)ವನ್ನು ಹೊಂದಬೇಕೆಂಬ ಅಪೇಕ್ಷೆಉಳ್ಳವರಾಗಿ ಆ ದೇವರಿಗೆ ವಿಧೇಯರಾಗಿ ವರ್ತಿಸುತ್ತಾರೆ. ಹೋಮಿಯೋಪಥಿಕ್ ಮಾತ್ರೆಗಳು ಸಣ್ಣದಾಗಿದ್ದರೂ ಅದು ಹೇಗೆ ದೊಡ್ಡ ಆಪರೇಶನ್ ಕಾರ್ಯಗಳನ್ನು ನಿರ್ವಾಹ ಮಾಡಬಲ್ಲದೋ ಅದರಂತೆಯೇ ವಿಜ್ಞಾನಶಾಸ್ತ್ರಗಳಲ್ಲಿ ಪ್ರಸಿದ್ಧವಾದ (Atom) ಪರಮಾಣು ಹೇಗೆ ದೊಡ್ಡ

ದೇಶವನ್ನು ನಾಶ ಮಾಡಬಲ್ಲದೋ; ಹಾಗೆ ಸ್ವಧರ್ಮಗಳು ಸಣ್ಣದಾಗಿದ್ದರೂ, ದೇವರ ಅನುಗ್ರಹದ್ವಾರಾ ದೊಡ್ಡದೊಡ್ಡ ವಿಪತ್ತಿನಿಂದ ಪಾರುಮಾಡಬಲ್ಲವುಗಳಾಗಿವೆ. ಪ್ರಕೃತ ಜಿತೇಂದ್ರಿಯರಾಗಬೇಕೆಂಬ ವಿಷಯದಲ್ಲಿ ಹೆಚ್ಚಿಗೆ ಆದರ ಬರುವುದಕ್ಕೋಸ್ಕರ, ಜಿತೇಂದ್ರಿಯರಾಗದೇ ಇರುವವರು ಹೇಗೆ ಕಷ್ಟಕ್ಕೆ ಗುರಿಯಾಗುವರು ಎಂಬುದಕ್ಕೆ ಕೆಲವು ದೃಷ್ಟಾಂತಗಳನ್ನು ತಿಳಿಸುತ್ತೇವೆ.

1. ಪತಂಗದ ಹುಳವು ತನಗೆ ಕಾಣುವ ದೀಪವನ್ನು ನೋಡಿ ಅದು ಹಣ್ಣು ಎಂಬ ಭ್ರಮೆಯಿಂದ ಅದರ ಮೇಲೆ ಬಿದ್ದು, ಸ್ವಲ್ಪ ತನ್ನ ಬಾಯಿ ಸುಟ್ಟರೂ ಲೆಕ್ಕಿಸದೆ ಪುನಃ ಪುನಃ ಆ ದೀಪದ ಮೇಲೆ ಬೀಳುತ್ತಾ ತನ್ನ ಪ್ರಾಣವೇ ಕಳೆದುಕೊಳ್ಳುತ್ತದೆ. ಚಕ್ಷುರಿಂದ್ರಿಯವನ್ನು ವಶಪಡಿಸಿಕೊಳ್ಳದವರು ಪರಸ್ತ್ರೀಮೊದಲಾದವುಗಳಲ್ಲಿ ದೃಷ್ಟಿಯುಳ್ಳವರಾಗಿ ಅವಮಾನ, ದ್ರವ್ಯನಾಶ ಮುಂತಾದ ಅನರ್ಥಗಳಿಗೆ ಗುರಿಯಾದರೂ ಲೆಕ್ಕಿಸದೆ ತಮ್ಮ ಪ್ರಾಣವನ್ನೇ ಒಪ್ಪಿಸಬೇಕಾದ ಸ್ಥಿತಿಯನ್ನು ಹೊಂದವರು.

2. ಜಿಂಕೆಗಳು ಮನುಷ್ಯನ ಕೈಗೆ ಸಿಕ್ಕದೆ ಹಾರುವ ಶಕ್ತಿಯುಳ್ಳವುಗಳಾಗಿದ್ದರೂ ಅವನ್ನು ಹಿಡಿಯಬೇಕೆಂಬ ಬೇಡರು ಬೆಳದಿಂಗಳ ಕಾಲದಲ್ಲಿ ಮರದಮೇಲೆ ಕುಳಿತು ಒಬ್ಬರಾದ ಮೇಲೆ ಮತ್ತೊಬ್ಬರು ಕೊಳಲು ಊದುತ್ತಿರುವಾಗ ಇಂಪಾದ ಆ ಧ್ವನಿಗೆ ಸೋತು ಶ್ರೋತ್ರೇಂದ್ರಿಯವನ್ನು (ಕಿವಿಯನ್ನು ) ತನ್ನ ಅಧೀನದಲ್ಲಿ ಇಟ್ಟುಕೊಳ್ಳಲಾರದೆ ರಾತ್ರಿಯೆಲ್ಲಾ ನಿದ್ರೆಯನ್ನು ಮಾಡದೆ, ಮೆಲುಕು ಹಾಕದೆ ಇರುವಾಗ ಅಜೀರ್ಣನಿಮಿತ್ತ ಮರುದಿನ ಬೆಳಗಿನ ಹೊತ್ತಿಗೆ ಹೊಟ್ಟೆ ಊದಿಕೊಂಡು ಜಿಗಿಯುವ ಶಕ್ತಿಯು ಹೋಗಿರುವಾಗ ಸುಲಭವಾಗಿ ಬೇಡರ ಕೈಗೆ ಸಿಕ್ಕಿಬೀಳುತ್ತೆವೆ. ಇದರಂತೆ ಹೆಂಡತಿ, ಮಕ್ಕಳು ಮೊದಲಾದವರ ಮಾತಿಗೆ ಬೆರಗಾಗಿ ಅವರುಗಳು ಹೇಳುವುದನ್ನೇ ಕೇಳುತ್ತಾ, ಪುರಾಣ ಮೊದಲಾದ ಸತ್ ಕಥೆಗಳನ್ನು ಕೇಳದೆ ಯಮದೂತರ ವಶರಾಗುವರು.

3. ಭ್ರಮರಗಳು, ಹೂವುಗಳ ಮಕರಂದ ಸುವಾಸನೆಗೆ ಬೆರಗಾಗಿ ಘ್ರಾಣೇಂದ್ರಿಯವನ್ನು ತನ್ನ ಅಧೀನಕ್ಕೆ ತಂದುಕೊಳ್ಳದೇ ಕಮಲದ ಮೇಲೆ ಕುಳಿತು ಮಕರಂದವನ್ನು ಆಸ್ವಾದಿಸುತ್ತಿರುವಾಗ ಸೂರ್ಯನು ಮುಳುಗಿದ ನಂತರ ಕಮಲವು ಮೊಗ್ಗಿನಂತೆ ಮುಚ್ಚಿದಾಗ ರಾತ್ರಿ ಎಲ್ಲಾ ಉಸಿರಾಡುವ ಸಾಮರ್ಥ್ಯ ಇಲ್ಲದೇ ಬೆಳಗಿನ ಹೊತ್ತಿಗೆ ಮರಣವನ್ನೇ ಹೊಂದುತ್ತವೆ. ಇದರಂತೆ ಘ್ರಾಣೇಂದ್ರಿಯವನ್ನು ಸ್ವಾಧೀನಕ್ಕೆ ತಂದುಕೊಳ್ಳದವರು ದೇವರಿಗೆ ಅರ್ಪಿತವಾದ ಪುಷ್ಪಾದಿಗಳನ್ನು ಆಘ್ರಾಣಿಸದೇ, ದೇವರಿಗೆ ಅನರ್ಪಿತವಾದ ಪುಷ್ಪವೇ ಮೊದಲಾದವುಗಳನ್ನು ಆಘ್ರಾಣಿಸುತ್ತಾ ಯಮಭಟರವಶರಾಗುವರು.

4. ಮೀನುಗಳು, ತಮ್ಮ ಆಹಾರವನ್ನು ದೇವರು ನೀರಿನಲ್ಲೇ ಇಟ್ಟಿರುವಾಗ ಅದಕ್ಕೆ ತೃಪ್ತಿಪಡದೆ, ಬೆಸ್ತರು ಭೂಮಿಯಲ್ಲಿ ಸಿಗುವ ಹುಳುಗಳನ್ನು ಕೊಕ್ಕೆಗೆ ಸಿಕ್ಕಿಸಿ ನೀರಿನಲ್ಲಿ ಹಾಕಿದ ಆ ಮಾಂಸಕ್ಕೆ ಬೆರಗಾಗಿ ತನ್ನ ನಾಲಿಗೆಯನ್ನು ಅದಕ್ಕೋಸ್ಕ ಚಾಚಿ, ಗಾಳಕ್ಕೆ ಸಿಕ್ಕಿ ಮರಣವನ್ನು ಹೊಂದುತ್ತವೆ. ನಿಷಿದ್ಧಪದಾರ್ಥಗಳನ್ನು ತಿಂದು ಜ್ಞಾನಕಳೆದುಕೊಂಡು ಅಜ್ಞಾನಮೂಲವಾದ ಆಗಾಧದುಃಖಕ್ಕೆ ಗುರಿಯಾಗುವರು.

5. ಮತ್ತವಾದ ಆನೆಯನ್ನು ಹಿಡಿಯಬೇಕೆಂಬ ಅಪೇಕ್ಷೆಉಳ್ಳವರು, ತಮ್ಮಲ್ಲಿರುವ ಹಳೇ ಹೆಣ್ಣು ಆನೆಯನ್ನು ಆ ಮತ್ತವಾದ ಆನೆಗೆ ದೊರಕುವಂತೆ ಮಾಡಿ, ಅದು ಹೆಣ್ಣಾನೆಯ ಮೋಹಕ್ಕೆ ವಶವಾಗಿ ಅನುಸರಿಸಿ ಹೋಗುವಾಗ ಹಳ್ಳದಲ್ಲಿ ಬೀಳುವಂತೆ ಮಾಡಿ, ಅನೇಕ ದಿನಗಳು ಆಹಾರವಿಲ್ಲದ ಸ್ಥಿತಿಯಲ್ಲಿ ಬಲಹೀನವಾದಾಗ ಅದನ್ನು ಸುಲಭವಾಗಿ ವಶಪಡಿಸಿಕೊಳ್ಳುತ್ತಾರೆ. ಇದರಂತೆ ಸ್ಪರ್ಶೇಂದ್ರಿಯಕ್ಕೆ ಮನಸೋತು, ಪರಸ್ತ್ರೀಯ ಸಂಗದಿಂದ ನರಕಾದ್ಯನರ್ಥಗಳಿಗೆ ಗುರಿಯಾಗುತ್ತಾರೆ.

ಹೀಗೆ ಚಕ್ಷುರಾದಿ ಒಂದೊಂದು ಇಂದ್ರಿಯಗಳನ್ನು ಗೆಲ್ಲಲಾರದೆ ಮರಣಕ್ಕೆ ಗುರಿಯಾಗುವ ಪ್ರಾಣಿಗಳ ದುಃಸ್ಥಿತಿಯನ್ನು ನೋಡುತ್ತಿರುವಾಗ ಐದು ಇಂದ್ರಿಯಗಳು ತನ್ನ ಅಧೀನವಾಗಿರುವ ಮನುಷ್ಯನು ತಾನು ಅವುಗಳನ್ನು ದುರ್ವಿಷಯದಿಂದ ದೂರಮಾಡಿಕೊಳ್ಳದೇ ಇದ್ದರೆ ಹೆಚ್ಚಿಗೆ ಹಾಳಾಗುವುದಕ್ಕೆ ಪೂರ್ಣ ಅವಕಾಶ ಉಂಟಷ್ಟೇ ! ಆ ಇಂದ್ರಿಯಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು ಸದ್ವಿಷಯಗಳಲ್ಲಿ ಉಪಯೋಗಿಸಿಕೊಂಡರೆ ದೇವರ ಅನುಗ್ರಹದ್ವಾರಾ ಮೋಕ್ಷ ಹೊಂದುವುದಕ್ಕೆ ಅವಕಾಶವು ದೊರಕುತ್ತದೆ. ಹೀಗೆ ವಿವೇಕದಿಂದ ಕೆಲಸ ಮಾಡುವುದಕ್ಕೆ ಕಾರಣವಾದ ಬುದ್ಧಿ ಶಕ್ತಿಯು ಮನುಷ್ಯನಿಗೆ ದೇವರಿಂದ ಕೊಡಲ್ಪಟ್ಟಿರುವುದರಿಂದ ಮನುಷ್ಯ ಜನ್ಮವು ಅತ್ಯಂತ ಶ್ರೇಷ್ಠವಾದದ್ದು ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಇಂದ್ರಿಯಗಳನ್ನು ದುರ್ವಿಷಯಗಳ ಕಡೆ ಕೊಡದೆ. ಸದ್ವಿಷಯಗಳ ಕಡೆ ಕೊಡುತ್ತಾ ದೇವರಲ್ಲಿ ಭಕ್ತಿಯಿಂದ ಕೂಡಿರುವವರು ಮೇಲೆ ಹೇಳಿದ ಶಾಸ್ತ್ರಗಳನ್ನಾಗಲೀ ಆ ಶಾಸ್ತ್ರಗಳ ಅರ್ಥವನ್ನು ಹೇಳುವ ಪ್ರಾಕೃತ ಭಾಷೆಯಿಂದ ರಚಿತವಾದ ಗ್ರಂಥಗಳನ್ನು ಕೇಳುತ್ತಲಾಗಲೀ ಇದ್ದರೆಅವರುಗಳಿಗೆ ದೇವರು ಜ್ಞಾನಭಾಗ್ಯವನ್ನು ಕೊಟ್ಟು ಕಾಪಾಡುವನು. ಅಜಿತೇಂದ್ರಿಯರಾದವರು ಎಷ್ಟು ಗ್ರಂಥಗಳನ್ನು ಓದಿದರೂ ಅವರಿಗೆ ಜ್ಞಾನ ದೊರೆಯಲಾದರದು. ಈ ಸಂದರ್ಭದಲ್ಲಿ ತಿಳಿಯಬೇಕಾದ ಒಂದು ವಿಷಯವೇನೆಂದರೆ ವಿದ್ಯಾ, ಜ್ಞಾನ ಎರಡೂ ಬೇರೆ ಬೇರೆಯಾದುದೆಂದು ತಿಳಿಯಬೇಕು. 'ಅಭ್ಯಾಸಾನುಸಾರಿಣೀ ವಿದ್ಯಾ, ಬುದ್ಧಿ ಕರ್ಮಾನುಸಾರಿಣೀ ಭಕ್ತಿ ಭಕ್ತಿ ಅನುಸಾರಿಣೀ ಮುಕ್ತಿ ಮುಕ್ತಿ ಅನುಸಾರಿಣೀ ಸುಖ '

ಹೀಗೆ ಜ್ಞಾನ ಬಯಸುವವರು ಜಿತೇಂದ್ರಿಯರಾಗಬೇಕು, ಅದಕ್ಕಿಂತ ಹೆಚ್ಚಿಗೆ ಜ್ಞಾನವಿರೋಧಿಯಾದ ಅವಿದ್ಯಾ(ಅಜ್ಞಾನ)ದ ಕಡೆಗೂ ದೃಷ್ಟಿ ಕೊಡಬೇಕು.

ತಮೋಗುಣದ ಕಾರ್ಯವಾದ ಅವಿದ್ಯೆಯು ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ ಮತ್ತು ಅಂಧತಾಮಿಸ್ರ ಎಂಬ ಐದು ಪ್ರಭೇದಗಳಿಂದ ಕೂಡಿದೆ.

1. ತಮಸ್ಸು ಎಂದರೆ ಕತ್ತಲೆಯಂತೆ ಪದಾರ್ಥಗಳ ಜ್ಞಾನಕ್ಕೆ ಅಡ್ಡಿಬರುವ ಒಂದು ಭಾವಪದಾರ್ಥವಾಗಿದೆ.

2. ಮೋಹವು ವಿಪರೀತಜ್ಞಾನ ಹುಟ್ಟಿಸುವುದು.

3. ಮಹಾಮೋಹ ಎಂದರೆ. ಆ ವಿಪರೀತಜ್ಞಾನದಲ್ಲಿ ಹಠರೂಪವಾದದ್ದು. ಮತ್ತು ತಾವು ತಿಳಿದಿರುವುದಕ್ಕೆ ವಿರೋಧ ಹೇಳುವವರಲ್ಲಿ ಕೋಪಮಾಡುವುದು.

4. ತಾಮಿಸ್ರ ಎಂದರೆ ತಾವು ಹೇಳುವ ವಿಷಯಗಳನ್ನು ಕೆಟ್ಟಯುಕ್ತಿಗಳಿಂದ, ಕುಶಾಸ್ತ್ರಗಳಿಂದ ಸಾಧಿಸುವುದು.

5. ಅಂಧತಾಮಿಸ್ರ ಎಂಬುದು ಅತೀಹಠದಿಂದ ಸಮಸ್ತವನ್ನೂ ಕಳೆದುಕೊಂಡು ಮಹಾದುಃಖಕ್ಕೂ ಮರಣಕ್ಕೂ ಕಾರಣವೆನಿಸುವುದು.

ಈ ಅವಿದ್ಯಾಪಂಚಕವು ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ ; ಗಂಧ ಎಂಬ ತನ್ಮಾತ್ರೆಗಳನ್ನು ಆಶ್ರಯಿಸಿರುತ್ತದೆ. ಇಂತಹ ಜ್ಞಾನವಿರೋಧಿ ಯಾದ ಅವಿದ್ಯಾಕ್ಕೆ ವಶರಾದವರು ದೇವರ ವಿಪರೀತಜ್ಞಾನವನ್ನು ಹೊಂದಿ ದೇವರಲ್ಲೂ, ದೇವರ ಭಕ್ತರಲ್ಲೂ ದ್ವೇಷ ಮಾಡುತ್ತಾ ಶಾಶ್ವತ ದುಃಖವುಳ್ಳ ಅಂಧಂತಮಸ್ಸನ್ನು ಹೊಂದುವರು. ಆದ್ದರಿಂದ , ದುಃಖ, ಅಜ್ಞಾನ ಇವುಗಳಿಗೆ ಹೆದರುವವರು ಅವಿದ್ಯಾಪಂಚಕಕ್ಕೆ ಆಶ್ರಯವಾದ ಶಬ್ದಾದಿಗಳ ಸೇವನೆಯಲ್ಲಿ ಬಹಳ ಎಚ್ಚರಿಕೆ ವಹಿಸಬೇಕು. ಹೀಗೆ ಎಚ್ಚರಿಕೆಯಿಂದ ಶಬ್ದಾದಿ ಸದ್ವಿಷಯಗಳನ್ನು ಸೇವಿಸುವವರು ಜ್ಞಾನದ್ವಾರಾ ದೇವರ ಅನುಗ್ರಹ ಹೊಂದಿ ಶಾಶ್ವತಸುಖವಾದ ಮೋಕ್ಷಕ್ಕೆ ಭಾಗಿಗಳಾಗುವರು.

ಸಾಮಾನ್ಯವಾದ ಅಜ್ಞಾನ, ಪಾಪಬುದ್ಧಿಗಳಿಂದ ಸಂಸಾರದ ದುಃಖ ನರಕಾದಿಗಳು ಮಾತ್ರ ಪ್ರಾಪ್ತವಾಗುತ್ತವೆ. ದೇವರ ಯಥಾರ್ಥಜ್ಞಾನ, ಭಕ್ತಿ ಇವುಗಳಿಂದ ನಾವು

ಹೇಳಿದಂತಹ ಶಾಶ್ವತಸುಖರೂಪವಾದ ಸ್ವಲ್ಪವೂ ದುಃಖವಿಲ್ಲದ ಮೋಕ್ಷ ದೊರಕುತ್ತದೆ.

## 9. ಜಿತೇಂದ್ರಿಯತ್ವದ ಅವಶ್ಯಕತೆ

ಜಿತೇಂದ್ರಿಯರಾಗಬಯಸುವವರು ಗಮನಿಸಬೇಕಾದ ಮುಖ್ಯವಾದ ವಿಷಯವೇನೆಂದರೆ , ದೇವರ ಅನುಗ್ರಹಸಂಪಾದನೆಗೆ ಹೊರಟರು ಇಂದ್ರಿಯಗಳನ್ನು ದುರ್ವಿಷಯಗಳ ಕಡೆ ಹೋಗಗೊಡದೆ ತಡೆದ ಮಾತ್ರಕ್ಕೆ ಪೂರ್ಣ ಜಿತೇಂದ್ರಿಯತ್ವ ಬರಲಾರದು, ಅಂದರೆ ದೇವರಿಗೆ ಪ್ರೀತಿಕರವಾದ ಸದ್ವಿಷಯಗಳನ್ನು ಆ ಇಂದ್ರಿಯಗಳಿಗೆ ಕೊಡುತ್ತಲೂ ಇರಬೇಕು. ಹಾಗೆ ಮಾಡದಿದ್ದರೆ. Empty brain is devil's place ಎಂಬಂತೆ ದುರ್ವಿಷಯಗಳಿಗೆ ನಾವೇ ಅವಕಾಶ ಕೊಟ್ಟಂತೆ ಆಗುತ್ತದೆ. ಸದ್ವಿಷಯಗಳನ್ನು ಸೇವನೆ ಮಾಡುವುದು ದೇವರ ಸೇವಾ ಎನ್ನಿಸಿ ದೇವರ ಅನುಗ್ರಹದ್ವಾರಾ ಜ್ಞಾನಕ್ಕೆ ಕಾರಣವಾಗುವುದು. ದೃಷ್ಟಾಂತಕ್ಕೆ ಋತುಕಾಲದಲ್ಲಿ ತಾನು ಸಮರ್ಥನಾಗಿದ್ದರೂ ದೇಶಕಾಲಗಳ ಸೌಕರ್ಯ ಇರುವಾಗಲೂ ಕಾಮಕ್ರೋಧಾದಿಗಳಿಗೆ ವಶನಾಗಿ ಸ್ವಸ್ತ್ರೀಯನ್ನು ಬಿಟ್ಟವನು ಭ್ರೂಣಹತ್ಯಾ ದೋಷಕ್ಕೆ ಭಾಗಿಯಾಗುವನು. ಒಂದೊಂದು ದಿವಸ ಬಿಟ್ಟವನು ಒಂದೊಂದು ದಿವಸ ಬಿಟ್ಟವನು ಒಂದೊಂದು ಸ್ತ್ರೀವಧಕ್ಕೆ ಭಾಗಿಯಾಗುವನು. ಒಂದು ವೇಳೆ ನಿಷಿದ್ಧದಿನಗಳಲ್ಲಿ ಸ್ವಸ್ತ್ರೀಯಲ್ಲಿ ಆಸಕ್ತನಾಗಿದ್ದರೂ , ಎಂದೂ ಪರಸ್ತ್ರೀಯನ್ನು ನೋಡದೇ ಇರುವವನು ಅಧಮ ಬ್ರಹ್ಮಚಾರಿ ಎಂದೆನಿಸಿಕೊಂಡು ದೇವರ ಅನುಗ್ರಹಕ್ಕೆ ಪಾತ್ರನಾಗುವನು. ಪರಸ್ತ್ರೀದೃಷ್ಟಿದೋಷವುಳ್ಳವನಿಗೆ ಮಾತ್ರ ಎಂದೂ ದೇವರ ಅನುಗ್ರಹವಾಗುವುದಿಲ್ಲ.

ಆಧುನಿಕರಾದ ದುರ್ಜನರು ಅನ್ಯಜಾತಿಯವರನ್ನು ವಿವಾಹ ಮಾಡಿ ಕೊಳ್ಳುವುದಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಪಶುಪಕ್ಷಿಗಳು ತಮಗಿಂತ ಭಿನ್ನಜಾತಿಯ ಸ್ತ್ರೀಸಂಗ ಮಾಡದೆ ಇರುವುದನ್ನು ತಿಳಿದಿದ್ದರೂ, ಅವುಗಳಿಗಿಂತಲೂ ನಾವು ಬುದ್ಧಿಶಕ್ತಿಯಿಂದ ಕೂಡಿರುವ ಉತ್ತಮರಾದ ಮನುಷ್ಯರು ಎಂಬ ಅಭಿಮಾನವುಳ್ಳವರಾಗಿ, ಆ ಪಶುಪಕ್ಷಿಗಳಿಗಿಂತ ಕಡೆಯಾಗಿ, ತಮಗಿಂತ ಭಿನ್ನ ಜಾತಿಯ ಸ್ತ್ರೀಯರನ್ನು ಬಯಸುವುದನ್ನು ನೋಡಿದರೆ ಯಾರಿಗೆ ಆಶ್ಚರ್ಯವಾಗುವುದಿಲ್ಲ,

ಜಿತೇಂದ್ರಿಯರಾಗಿ ದೇವರ ಜ್ಞಾನಸಂಪಾದನೆ ಮಾಡಬೇಕೆಂಬ ಅಪೇಕ್ಷೆ ಉಳ್ಳವರು ಅದಕ್ಕೆ ವಿರೋಧಿಯಾದ ದೇವರ ಮಾಯಾರೂಪವಾದ ಸ್ತ್ರೀ(ಪರಸ್ತ್ರೀ) ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಅಂದರೆ ದರ್ಶನ, ಸ್ಪರ್ಶನ, ಕೇಲಿ ಮೊದಲಾದ ಅಷ್ಟವಿಧಮೈಥುನಗಳ ಮಧ್ಯದಲ್ಲಿ ಯಾವುದಕ್ಕೂ ಅವಕಾಶ ಕೊಡಬಾರದು. ಜಿತೇಂದ್ರಿಯರಾದವರು ಕಾಲೋಚಿತವಾಗಿ ಸ್ವಸ್ತ್ರೀಸಂಗವನ್ನು ಬಿಡಬಾರದು. ಹಾಗೆ ಬಿಡುವುದು ಒಂದು ದೊಡ್ಡ ಅಪರಾಧವಾಗುತ್ತದೆ. ಸ್ವಸ್ತ್ರೀಯಲ್ಲಿ ಹೆಚ್ಚಿಗೆ ಮಕ್ಕಳನ್ನು ಪಡೆಯುವುದೇ ಒಂದು ದೊಡ್ಡ ದೇವರ ಸೇವಾ ಆಗುತ್ತದೆ. ಹೀಗೆ ನಮಗೆ ಅನಾಯಾಸವಾಗಿ ಹುಟ್ಟುವ ಮಕ್ಕಳನ್ನಾದರೂ ದೇವರ ಸೇವೆಯೆಂದು ಸಮರ್ಪಣೆ ಮಾಡಿದರೆ ದೇವರ ಅನುಗ್ರಹ ಆಗೇ ಆಗುತ್ತದೆ. ಇಷ್ಟು ಸುಲಭವಾದ ದೇವರ ಸೇವೆಯನ್ನು ಕಳೆದುಕೊಳ್ಳುತ್ತಾ ಸಂತಾನನಿಯಂತ್ರಣ (Brith Control) ಕಡೆಗೆ ದೃಷ್ಟಿಕೊಡುವವರು; ಪೂತನೀ, ಶಾಕಿನೀ, ಡಾಕಿನೀಗುಂಪಿಗೆ ಸೇರಿದವರೆಂದೇ ಹೊಗಳುತ್ತಿರುವಾಗಲೂ, ಮ್ಲೇಂಛರು ಖುರಾನ್‌ನಲ್ಲಿ ಸಂತಾನ ನಿಯಂತ್ರಣವನ್ನು ವಿರೋಧಿಸುವರೆಂದು ಹೇಳುತ್ತಾ ಅದನ್ನು ಜಾರಿಗೆ ತರದೇ ಇರುತ್ತಿರುವಾಗಲೂ ನಾವು ಅದನ್ನು ಜಾರಿಗೆ ತಂದಿರುವುದು ಅವಮಾನಕರವಲ್ಲವೇ ? ಕೆಲವರು ನಮ್ಮ ಆಹಾರ ಸಮಸ್ಯೆಯು

ನಮ್ಮನ್ನು Brith Control ಸ್ಥಿತಿಗೆ ಗುರಿಮಾಡಿದೆ ಎಂದು ಹೇಳುತ್ತಾರೆ. ಅದೂ ಸರಿಯಲ್ಲ. ದೇವರನ್ನು ಪ್ರಾರ್ಥನೆ ಮಾಡಿ ಕೊಂಡು ಬಹುಧನಧಾನ್ಯಾದಿಗಳನ್ನು ಸಂಪಾದಿಸಿಕೊಂಡು, ಪ್ರಜಾಭಿವೃದ್ಧಿಯನ್ನು ಮಾಡಬೇಕೆಂಬುದನ್ನು ವೇದಶಾಸ್ತ್ರಗಳು ತಿಳಿಸುತ್ತಿರುವುದರಿಂದ ಆಹಾರದ ಸಮಸ್ಯೆಗೆ ಅವಕಾಶವಿಲ್ಲ. ಅನ್ಯದೇಶದವರು ನಮ್ಮ ದೇಶಕ್ಕೆ ಬರುತ್ತಿರುವಾಗ, ಅವರಿಗೆ ಪರೋಪಕಾರ ಮಾಡುತ್ತೇವೆಂಬ ಅಭಿಮಾನ ಉಳ್ಳವರಾಗಿ ಸುಖಾಗಮನವನ್ನು ಬಯಸುತ್ತಾ ತಮ್ಮ ಪ್ರಜೆಗಳಿಗೆ ಘಾತಕರಾಗುವವರು ''ಮನೆಗೆ ಮಾರಿ, ಪರರಿಗೆ ಉಪಕಾರಿ '' ಎಂಬ ಗಾದೆಗೆ ವಿಷಯವಾಗುವವರಷ್ಟೇ ? ಇವರ ಪರೋಪಕಾರಧರ್ಮವು ಹಸುವನ್ನು ಕೊಂದು. ಪಾದರಕ್ಷೆ ದಾನಮಾಡಿದವರಂತೆ ಆಗುವುದಿಲ್ಲವೇ ? ದೇವರ ಭಕ್ತರಾದ ಮಕ್ಕಳನ್ನು ತಾವು ಪಡೆದು ಅವರನ್ನು ಬೆಳೆಸುವುದರಿಂದ ದೇವರ ಸೇವಾ ಆಗುವುದೇ ವಿನಹ; ದೇವರ ಪ್ರತಿಮಾ ಭಿನ್ನ ಮಾಡೋಣ, ಗೋಮಾಂಸ ಭಕ್ಷಣ, ಮದ್ಯಪಾನ , ವ್ಯಭಿಚಾರ ಮುಂತಾದ ಘೋರ ಕೃತ್ಯಗಳನ್ನು ನಡೆಸುತ್ತಿರುವವರಿಗೆ ಉಪಕಾರ ಮಾಡುವುದು ಧರ್ಮವೆಂದೆನಿಸುವುದಿಲ್ಲ. ಒಬ್ಬ ದುಷ್ಟಮನುಷ್ಯನಿಗೆ ಸಹಾಯ ಮಾಡುವುದು ನೂರಾರು ಸಜ್ಜನರಿಗೆ ದುಃಖ ಕೊಡುವುದಕ್ಕೆ ಸಮಾನವೆಂದು ತಿಳಿಯಬೇಕು, ಗೋವಿನಲ್ಲಿ ಸಕಲದೇವತೆಗಳ ಸನ್ನಿಧಾನ ಇರುವುದರಿಂದ ವೇದ ಶಾಸ್ತ್ರಗಳನ್ನು ನಂಬುವ ಯಾರಿಗೂ ಹಸುಗಳನ್ನು ಹಿಂಸಿಸುವ ಬುದ್ಧಿ ಸ್ವಪ್ನದಲ್ಲೂ ಬರಲಾರದು. ನಾವು ಗುರುಗಳನ್ನು ಕುರಿತು 'ನಾವು ಸ್ವರಾಜ್ಯ ಸಂಪಾದನೆ ಮಾಡಿ ಅನೇಕವರ್ಷಗಳಾದರೂ ಮುಂದುವರೆಯದೆ ಇರುವುದಕ್ಕೆ ಕಾರಣವೇನೆಂದರೆ' ಕೇಳಿದನು. ಆಗ ನಾವು ನಮ್ಮನ್ನು ಪ್ರಶ್ನೆ ಮಾಡಿದರೆ ಏನು ಉತ್ತರ ಕೊಡೋಣವೆಂದು ಯೋಚಿಸಿದೆವು. ನಮಗೆ ತೋರಿದ್ದೇನೆಂದರೆ ; 'ನೀವು ಭಾರತ ಮಾತಾಕಿ ಜೈ ' ಎಂದು ಹೇಳುತ್ತಾ ತಾಯಿಯ ಕಡೆ ಭಕ್ತಿಯಿಂದ ದೃಷ್ಟಿ ಕೊಟ್ಟಿದ್ದರೂ ತಂದೆಯಾದ ಕೃಷ್ಣನ ಕಡೆ

(ಅಂದರೆ ಅವನೇ ಉಪದೇಶಿಸಿದ ಗೀತಾತತ್ವಗಳ ಕಡೆ ). ದೃಷ್ಟಿಕೊಟ್ಟಿಲ್ಲವಾದ್ದರಿಂದ, ತಾಯಿಯಾದ ಭಾರತ ಮಾತೆಯು ಪತಿವ್ರತಾ ಶಿರೋಮಣಿಯಾದ್ದರಿಂದ , ನಮ್ಮನ್ನು ಕುರಿತು 'ಎಲಾ ನಿರ್ಭಾಗ್ಯರೇ, ನನ್ನ ಪತಿಯಾದ , ನಿಮಗೆ ತಂದೆಯಾದ ಶ್ರೀಕೃಷ್ಣನ ಆಜ್ಞಾಕಡೆಗೆ ದೃಷ್ಟಿ ಕೊಡದೆ, ನನ್ನನ್ನು ಮಾತ್ರ ಸೇವೆ ಮಾಡುತ್ತೀರಲ್ಲಾ, ನಾನೇನು ವಿಧವಾ ಸ್ತ್ರೀಯೇ ? ಎಂಬುದಾಗಿ ನಮ್ಮ ಮೇಲೆ ಕೋಪ ಮಾಡುವಳೇ ವಿನಹ, ಸರ್ವಥಾ ಪ್ರೀತಿಮಾಡಲಾರಳು. ಹೀಗೆ ತಂದೆತಾಯಿಗಳ ಪ್ರೀತಿಗೆ ಪಾತ್ರರಾಗದವರಾಗಿ ಆಶೆಪಟ್ಟರೆ, ಯಾವ ನಮ್ಮ ಆಶೆಯು ತಾನೇ ಸಿದ್ಧಿಸುತ್ತದೆ ? ಆದ್ದರಿಂದ ಇಬ್ಬರ ಕಡೆಗೂ ದೃಷ್ಟಿ ಕೊಡಿರಿ ' ಎಂದು ಹೇಳಬೇಕೆಂದು ಕೊಂಡಿದ್ದೆವು. ಆದರೆ ಅವಕಾಶ ದೊರೆಯದೆ ಹೇಳಲಾಗಲಿಲ್ಲ. ಈ ವಿಚಾರವನ್ನು ಹೇಳುವ ಸಂದರ್ಭ ಈಗ ಏಕೆ ದೊರೆಯಿತೆಂದರೆ; ಶ್ರೀಕೃಷ್ಣನ ಅನುಗ್ರಹದಿಂದ ಶಾಶ್ವತಸುಖವನ್ನು ಪಡೆಯುವುದಕ್ಕೆ ಹೊರಟಿರುವ ನಾವು, ಯಾವ 'ಗೋ ' ಜಾತಿಗೆ ಶ್ರೀಕೃಷ್ಣನು ರಕ್ಷಕನೆಂದು (ಗೋಪಾಲಕನೆಂದು) ತಿಳಿದಿದ್ದೇವೋ ಆ ಗೋಜಾತಿಯಲ್ಲಿ ಪೂಜ್ಯಭಾವನೆಯನ್ನು ಇಟ್ಟಾಗ ಮಾತ್ರ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರರಾಗುವೆವು.

ಇದರಂತೆಯೇ ಮನುಷ್ಯರಲ್ಲಾಗಲೀ , ಪಶುಪಕ್ಷಿಗಳಲ್ಲಾಗಲೀ, ವೃಕ್ಷಜಾತಿಗಳಲ್ಲಾಗಲೀ ಕಲ್ಲುಗಳಲ್ಲಾಗಲೀ ಶ್ರೀಕೃಷ್ಣನ ಸನ್ನಿಧಾನವು ಎಷ್ಟೆಷ್ಟು ಇರುತ್ತದೆ ಎಂಬುದನ್ನು ಶಾಸ್ತ್ರದಿಂದ ತಿಳಿದು ಅದಕ್ಕೆ ತಕ್ಕಂತಹ ಮರ್ಯಾದೆಯನ್ನು ಸಲ್ಲಿಸಿದರೆ , ಸರ್ವಸಮರ್ಥನಾದ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರಾಗಿ ಸುಖವನ್ನು ಹೊಂದುವರು.

## 10. ದೇವರ ಅನುಗ್ರಹದಿಂದ ದೊರೆಯುವ ಮಹಾಫಲ

ಸಜ್ಜೀವರು, ದೇವರ ಭಕ್ತರು ಆಗಿದ್ದರೂ ಅವರಿಗೆ ಲಿಂಗಶರೀರ ಸಂಬಂಧವಿರುವವರೆಗೂ , ಹುಟ್ಟುಸಾವು ತಪ್ಪಲಾರದು. ಹುಟ್ಟುಸಾವುಗಳು

ದುಃಖಕರವಾದವುಗಳೇ ಆಗಿರುತ್ತವೆ. ಮಧ್ಯದ ಅವಸ್ಥೆಯಲ್ಲೂ 'life is a great struggle ' ಎಂಬಂತೆ ಜೀವನದಲ್ಲಿ ಸ್ವಲ್ಪ ಸುಖವಿದ್ದರೂ ಹೆಚ್ಚಿಗೆ ದುಃಖವೇ ಇರುತ್ತದೆ. ಇದಕ್ಕೆ ಸಂಸಾರವಸ್ಥೆಯೆಂದು ಕರೆಯುತ್ತಾರೆ. ದೇವರು ತನ್ನ ಭಕ್ತರಿಗೆ ಈ ಸಂಸಾರವಸ್ಥೆಗೆ ಕಾರಣವಾದ ಲಿಂಗಶರೀರವನ್ನೇ ಪರಿಹಾರ ಮಾಡಿ, ಶುದ್ಧಜೀವರುಗಳನ್ನು ತನ್ನ ಲೋಕದಲ್ಲಿಟ್ಟು ಶಾಶ್ವರವಾದ ತೃಪ್ತಿಯಾಗುವಷ್ಟು ಸುಖವನ್ನು ಕೊಟ್ಟು ದುಃಖಸಂಬಂಧ ಸ್ವಲ್ಪವೂ ಆಗದಂತೆ ಕಾಪಾಡುತ್ತಾನೆ. ಇದನ್ನೇ ಮುಕ್ತಿಯೆಂದು ಕರೆಯುತ್ತಾರೆ. ಈ ಮುಕ್ತಿಗೆ ಕಾರಣವಾದದ್ದೇ ದೇವರ ಅನುಗ್ರಹ. ಅದಕ್ಕೆ ಕಾರಣವಾದದ್ದೇ ಭಕ್ತಿ ಎನಿಸುವುದು, ಆ ಭಕ್ತಿ ವಿಚಾರವನ್ನು ನಮ್ಮ ಮುಂದಿನ ಗ್ರಂಥದಿಂದ ತಿಳಿಯಬಹುದು. ಆ ಭಕ್ತಿಗೆ ಕಾರಣವಾದದ್ದೇ ಸನಾತನಧರ್ಮಗಳು.

ಹೀಗೆ ಸನಾತನಧರ್ಮಗಳು ನಮ್ಮ ಈ ಲೋಕದ ಅಲ್ಪಸುಖಕ್ಕೂ ಮಹಾಸುಖವಾದ ಮೋಕ್ಷಕ್ಕೂ ಕಾರಣವಾದದ್ದೇ ವಿನಹ ದುಃಖಕ್ಕೆ ಕಾರಣವಾದವುಗಳಲ್ಲ ಎಂಬಲ್ಲಿಗೆ ಈ ಗ್ರಂಥ ಸಮಾಪ್ತಿಯಾಗುವುದು.

॥ ಸರ್ವೇ ಜನಾಃ ಸುಖಿನೋ ಭವಂತು ॥

ಶುಭಮಸ್ತು

॥ ಶ್ರೀದೇವೇಂದ್ರತೀರ್ಥಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ

ಶ್ರೀಮಧ್ವೇಶಾರ್ಪಣಮಸ್ತು ॥

ಶ್ರೀತಾರಣ ಸಂವತ್ಸರ ಫಾಲ್ಗುಣ ಶುದ್ಧ ನವಮಿ (ಶ್ರೀರಾಮನವಮಿ)
29-03-2004.
ಭೀಮಣ್ಣ ಕೆಂಪದಾಳಿಹಳ್ಳಿ